MR. SPEAKER.—I heartily congratulate Sri K.H. Ranganath on his election as the Speaker of this House. The mover and the Seconder of the resolution will please conduct Sri K. H. Ranganath to the Speakers chair.

[*Sri K.H. Ranganath.— (was led to the seat of the Speaker by Hon. Sri M. Veerappa Moily (Minister for Finance) and Hon. Sri P. Venkataramana (Minister for Social Welfare and Backward Classes) Sri K H. Ranganath shook hands with the Pro tem Speaker and took the seat.)*]

Felicitations to the Speaker

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಮಗೆಲ್ಲರಿಗೂ ಬಹಳ ಹರ್ಷದಾಯಕವಾದಂಥ ದಿವಸ. ನಮ್ಮ ಈ ಸದನದ ಅಧ್ಯಕ್ಷರಾಗಿ, ಅವಿರೋಧವಾಗಿ ಎಲ್ಲಾ ಪಕ್ಷಗಳ ಸದಸ್ಯರ ಒಮ್ಮತದಿಂದ ಆಯ್ಕೆಯಾಗಿ ಈ ದಿನ ಇಂಥಾ ಒಂದು ಶ್ರೇಷ್ಠ ಸ್ಥಾನವನ್ನು ಅಲಂಕರಿಸಿದಂಥ ಶ್ರೀಮಾನ್ ಕೆ.ಎಚ್. ರಂಗನಾಥ್ ಅವರು ನಮ್ಮ ಈ ಕರ್ನಾಟಕ ಶಾಸನ ಸಭೆಯ ಹಿರಿಯ ಸದಸ್ಯರಲ್ಲಿ ಒಬ್ಬರು. ಅವರು ರಾಜಕೀಯವನ್ನು ಪ್ರವೇಶ ಮಾಡಿದ ಮೇಲೆ ಅನೇಕ ಹಂತಗಳಲ್ಲಿ, ವಿವಿಧ ಸ್ಥಾನಗಳಲ್ಲಿ ಸೇವೆಯನ್ನು ಸಲ್ಲಿಸುತ್ತಾ ಬರುತ್ತಿದ್ದಾರೆ. ಹಿಂದೆ ಪಿ.ಎಸ್.ಪಿ.ಯಿಂದ ಮೊದಲನೇ ಬಾರಿಗೆ ಚುನಾಯಿತರಾಗಿ ಅಂದಿನ ಮೈಸೂರು ಶಾಸನಸಭೆಯನ್ನು ಪ್ರವೇಶಿಸಿದರು. ಅವರು ಸಾಕಷ್ಟು ಅನುಭವವನ್ನು ಪಡೆದಿರುವಂಥ ಸದಸ್ಯರು, ಜೊತೆಗೆ ಉತ್ತಮ ವಕೀಲರಾಗಿಯೂ ಕೂಡ ಕೆಲಸ ಮಾಡಿದಂಥ ವ್ಯಕ್ತಿಗಳು. ಯಾವುದೇ ಸ್ಥಾನದಲ್ಲಿ ಅವರು ಅಧಿಕಾರದಲ್ಲಿದ್ದಾಗಲೂ ಸಹ ಎಲ್ಲರ ವಿಶ್ವಾಸಕ್ಕೆ, ಪ್ರೀತಿಗೆ ಒಳಗಾಗಿ ಅವರು ಕಾರ್ಯವನ್ನು ನಿರ್ವಹಿಸಿದ್ದಾರೆ. ೧೯೬೯ರಲ್ಲಿ ರಾಷ್ಟ್ರದಲ್ಲಿಯೇ ಕಾಂಗ್ರೆಸ್ ಪಕ್ಷ ಇಬ್ಭಾಗವಾಗಿ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ವಿಶ್ವಾಸವನ್ನಿಟ್ಟು ಮತ್ತು ಅವರ ತತ್ವ ಹಾಗೂ ನೀತಿಗಳಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿ ಅವರು ಕಾಂಗ್ರೆಸ್ ಪಕ್ಷವನ್ನು ಸೇರಿದರು. ಅಂದಿನಿಂದ ಮಂತ್ರಿಗಳಾಗಿ, ಅನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದುದರ ಜೊತೆಗೆ ಪುನ: ಮಂತ್ರಿಗಳಾಗಿ ಅವರು ದಕ್ಷ ಸೇವೆಯನ್ನು ಸಲ್ಲಿಸಿದ್ದಾರೆ. ಮತ್ತು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಇಡೀ ರಾಷ್ಟ್ರದ ಜನತೆ ಶ್ರೀಮತಿ ಇಂದಿರಾಗಾಂಧಿಯವರ ಕಾಂಗ್ರೆಸ್ ನಿಜವಾದ ಕಾಂಗ್ರೆಸ್ ಮತ್ತು ಅವರೇ ಈ ರಾಷ್ಟ್ರದ ನಾಯಕಿ ಎಂದು ತೀರ್ಪು ನೀಡಿದ ಮೇಲೆ ಅವರ ನಾಯಕತ್ವದಲ್ಲಿ ವಿಶ್ವಾಸವಿಟ್ಟು ಪುನ: ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದಲ್ಲಿ ನಿಷ್ಠೆಯನ್ನು ವ್ಯಕ್ತಪಡಿಸಿ ಜನತೆಯ ತೀರ್ಪಿಗೆ ತಲೆಬಾಗಿ ಅವರು ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವವಿರುವಂಥ ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದಾರೆ ಮತ್ತು ಅವರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಇಂಥಾ ಒಂದು ಸಂದರ್ಭದಲ್ಲಿ ಹಿಂದೆ ಸ್ಪೀಕರಾಗಿ ಕೆಲಸ ಮಾಡಿದಂಥ ಮಾನ್ಯ ವೆಂಕಟರಮಣ ಅವರು ಮಂತ್ರಿಮಂಡಲವನ್ನು ಸೇರಿದ ಮೇಲೆ ಆ ಸ್ಥಾನಕ್ಕೆ ಶ್ರೇಷ್ಠವಾದ ಒಬ್ಬ ವ್ಯಕ್ತಿಯನ್ನು ಆರಿಸುವುದು ಸೂಕ್ತ. ಏಕೆಂದರೆ ಈ ವಿಧಾನ ಸಭೆಯ ಅಧ್ಯಕ್ಷ ಸ್ಥಾನ ಬಹಳ ಪವಿತ್ರವಾದಂಥ ಸ್ಥಾನ.

೧-೩೦ ಪಿ.ಎಂ.

ಒಂದು ಸಾರಿ ಈ ಸ್ಥಾನವನ್ನು ಅಲಂಕರಿಸಿದ ಮೇಲೆ ತಕ್ಕಡಿಯ ರೀತಿಯಲ್ಲಿ ನ್ಯಾಯವಾದ ತೀರ್ಪನ್ನು ಆ ಸ್ಥಾನದಿಂದ ಕೊಡಬೇಕಾಗುತ್ತದೆ. ಆ ಸ್ಥಾನದಲ್ಲಿರುವವರು ಯಾವ ಪಕ್ಷದ ಸದಸ್ಯರೂ ಆಗಿರುವುದಿಲ್ಲ ಅವರು ಪಕ್ಷಾತೀತರು, ಎಲ್ಲ ಸದಸ್ಯರೂ ಅವರಿಗೇ ಒಂದೇ, ಪ್ರತಿಯೊಬ್ಬರ ವಿಶ್ವಾಸ ಪ್ರೀತಿ ಗೌರವಗಳನ್ನು ಉಳಿಸಿಕೊಳ್ಳುವಂಥ ಸ್ಥಾನವಾಗಿದೆ. ಈ ಸ್ಥಾನಕ್ಕಾಗಿ ನಮ್ಮ ಪಕ್ಷದಲ್ಲಿ ಯಾರನ್ನು ಆರಿಸಬೇಕೆಂದು ಕೇಳಿದಾಗ ಎಲ್ಲ ಸದಸ್ಯರೊಡನೆ ವಿಚಾರ ಮಾಡಿದಾಗ ಎಲ್ಲರೂ ಒಮ್ಮತದಿಂದ ಶ್ರೀಮಾನ್ ರಂಗನಾಥ್‌ರವರ ಹೆಸರನ್ನೇ ಒಪ್ಪಿದ್ದರು. ಅದರಂತೆ ಇವತ್ತು ಅಧ್ಯಕ್ಷರ ಚುನಾವಣೆ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕಾಗಿ ನನಗೆ ಬಹಳ ಸಂತೋಷ ಉಂಟಾಗಿದೆ. ಈ ಒಂದು ಸ್ಥಾನಕ್ಕೆ ಅಷ್ಟೊಂದು

ಹಿರಿಯ ಅನುಭವಿಗಳಾದ ಮತ್ತು ಕರ್ನಾಟಕ ವಿಧಾನ ಸಭೆಯ ಸತ್‌ಸಂಪ್ರದಾಯದ ಪ್ರಕಾರ ಈ ಸ್ಥಾನದ ಘನತೆ, ಗೌರವ ಮತ್ತು ತೂಕವನ್ನು ಎತ್ತಿ ಹಿಡಿಯಲಿಕ್ಕೆ ನಮ್ಮ ಸರ್ಕಾರ ಇರಬೇಕಾದರೆ ತಾವು ಸಿಕ್ಕಿದಿರಲ್ಲಾ ಎನ್ನುವ ಸಂತೋಷ ಮತ್ತು ಹೆಮ್ಮೆ ಉಂಟಾಗಿದೆ. ಅಂಥಾ ಸ್ಥಾನವನ್ನು ಮಾನ್ಯ ಶ್ರೀ ರಂಗನಾಥ್‌ರವರು ಅಲಂಕರಿಸಿದ್ದಾರೆ. ಅವರು ತಮ್ಮ ಕಾಲದಲ್ಲಿ ಕರ್ನಾಟಕದ ಶಾಸನ ಸಭೆಯ ಅಧ್ಯಕ್ಷತೆಯಲ್ಲಿ ಒಳ್ಳೆಯ ಸತ್‌ಸಂಪ್ರದಾಯಗಳನ್ನು ಘನತೆ, ಗೌರವಗಳನ್ನು ಇನ್ನು ಹೆಚ್ಚಿಗೆ ಬೆಳೆಸಿ ಕೊಂಡು ಹೋಗುತ್ತಾರೆ ಮತ್ತು ಆ ರೀತಿಯಲ್ಲಿ ಅವರಿಗೆ ಅನುಕೂಲವಾಗಲು ಎಲ್ಲ ರೀತಿಯ ನೆರವನ್ನು ಆ ಕನ್ನಡ ಮಾತೆ ಅವರಿಗೆ ಆಶೀರ್ವದಿಸಲಿ ಎಂದು ಹೇಳುತ್ತಾ, ಜೊತೆಗೆ ಈ ಸದನದ ನಾಯಕನಾಗಿ ನಾನು ಅವರಿಗೆ ಎಲ್ಲ ರೀತಿಯ ನೆರವನ್ನು, ಸಹಕಾರವನ್ನು ನಮ್ಮ ಪಕ್ಷದ ಪರವಾಗಿ ಮತ್ತು ಈ ಸದನದ ಪರವಾಗಿ ನೀಡಲಿಕ್ಕೆ ಹರ್ಷವಾಗುತ್ತದೆ. ಮತ್ತು ಅವರಿಗೆ ಎಲ್ಲ ರೀತಿಯ ಸಹಕಾರ ಮತ್ತು ನೆರವನ್ನು ನೀಡುತ್ತೇವೆಂದು ಆಶ್ವಾಸನೆ ಕೊಡುತ್ತಾ ಅವರ ಈ ಒಂದು ಸೇವೆ ನಮ್ಮ ರಾಜ್ಯಕ್ಕೆ ಹೆಚ್ಚು ಕಾಲ ದೊರೆಯುವಂತಾಗಲೀ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಾ ನಮ್ಮ ಈ ಸದನದ ಎಲ್ಲ ಸದಸ್ಯರ ಪರವಾಗಿ ಮತ್ತು ಕರ್ನಾಟಕ ರಾಜ್ಯದ ಪರವಾಗಿ ಈ ಸಭೆಯ ನಾಯಕನಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ಅವರನ್ನು ಬಹಳ ಸಂತೋಷದಿಂದ ಅಭಿನಂದಿಸುತ್ತಾ, ಅವರು ಈ ಸ್ಥಾನವನ್ನು ಅಲಂಕರಿಸಿರುವುದಕ್ಕೆ ಮತ್ತೊಮ್ಮೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ ತಾವು ಅವಿರೋಧವಾಗಿ ಆಯ್ಕೆ ಹೊಂದಿ ಈ ಸ್ಥಾನವನ್ನು ಅಲಂಕರಿಸಿರುವುದು ಮನಃಪೂರ್ವಕವಾಗಿ ನಮಗೆ ಬಹಳ ಸಂತೋಷ ಉಂಟು ಮಾಡಿದೆ. ಇಲ್ಲಿ ತಾವು ಅಲಂಕರಿಸಿರತಕ್ಕ ಸ್ಥಾನ ಗುರುತರವಾದ ಜವಾಬ್ದಾರಿಯಿಂದ ಕೂಡಿದೆ. ಸ್ವಾಮಿ, ತಾವು ಆ ಸ್ಥಾನದಲ್ಲಿ ಕುಳಿತು ಈ ಸದನದ ಸದಸ್ಯರ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡುವುದು ಅಷ್ಟೇ ಮಾತ್ರವಲ್ಲದೆ ಇಡೀ ರಾಜ್ಯದ ಜನತೆಯ ಭವಿಷ್ಯವನ್ನು ಕುರಿತು ಚರ್ಚೆ ಮಾಡತಕ್ಕ ವಿಷಯಗಳ ಬಗ್ಗೆ ರೆಗ್ಯುಲೇಟ್ ಮಾಡತಕ್ಕಂಥ ಒಂದು ದೊಡ್ಡ ಜವಾಬ್ದಾರಿ ನಿಮ್ಮ ಮೇಲಿದೆ. ಹಲವು ಸಾರಿ ಈ ಸದನದಲ್ಲಿ ಪ್ರಾಮುಖ್ಯವಲ್ಲದ ವಿಷಯಗಳಿಗೆ ಅನಾವಶ್ಯವಾಗಿ ಸಮಯವನ್ನು ತೆಗೆದುಕೊಂಡು ಈ ಸದನದ ಸಮಯವನ್ನು ವಿನಾಕಾರಣ ಹಾಳು ಮಾಡಿದ್ದು ಉಂಟು. ಅದಕ್ಕೆ ಯಾರು ಕಾರಣರು ಎಂದು ಹೇಳುವುದಿಲ್ಲ. ಆದರೆ ತಾವು ಅಂಥಾ ಒಂದು ಅವಕಾಶವನ್ನು ಕೊಡುವುದಿಲ್ಲವೆಂದು ನಂಬಿದ್ದೇನೆ ಮತ್ತು ವಿನಂತಿ ಮಾಡಿಕೊಳ್ಳುತ್ತೇನೆ. ಆಳುವ ಪಕ್ಷ ಮತ್ತು ವಿರೋಧ ಪಕ್ಷ ಇವರಿಗೂ ಸಹ ಸಂಸದೀಯ ಪ್ರಜಾತಂತ್ರದಲ್ಲಿ ಒಂದು ರಥದ ಎರಡು ಚಕ್ರಗಳು ಇದ್ದ ಹಾಗೆ. ಅವರ ಜವಾಬ್ದಾರಿ ಅವರಿಗಿರುತ್ತದೆ ನಮ್ಮ ಜವಾಬ್ದಾರಿ ನಮ್ಮ ಹೊಣೆಗಾರಿಕೆ ನಮಗಿರುತ್ತದೆ. ಆದರೆ ಒಂದು ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಅದು ಇಂಗ್ಲೀಷ್‌ನಲ್ಲಿ ಇರುವುದರಿಂದ ಇಂಗ್ಲೀಷ್‌ನಲ್ಲಿ ಹೇಳುತ್ತೇನೆ. 'One Ounce of indiscipline on the part of the ruling party is equal to one tonne of indiscipline on the part of the opposition.'' ಇದನ್ನು ಹೌಸ್ ಆಫ್ ಕಾಮನ್ಸ್‌ನಲ್ಲಿ ಒಬ್ಬ ಪ್ರಸಿದ್ಧ ಅಧ್ಯಕ್ಷರು ಹೇಳಿರುವಂಥಾದ್ದು. ಆದುದರಿಂದ ಈ ಸದನದಲ್ಲಿ ಘನತೆ ಗಂಭೀರವನ್ನು ಉಳಿಸಿಕೊಳ್ಳಬೇಕಾದರೆ ಮೊದಲನೆಯದಾಗಿ ಹೊರಗಡೆ, ದೇಶದಲ್ಲಿ ವಾತಾವರಣ ಚೆನ್ನಾಗಿರಬೇಕು, ಹೊರಗಡೆ ಉದ್ವಿಗ್ನತೆ ಇರುವಾಗ ನಾವು ಡಿಗ್ನಿಟಿ, ಡೆಕೋರಂ ನೋಡಿಕೊಂಡು, ಬಾಯಿ ಮುಚ್ಚಿಕೊಂಡು ಕೂರುವುದಕ್ಕೆ ಆಗುವುದಿಲ್ಲ. ಆದುದರಿಂದ ಹೊರಗಡೆ ಕೂಡ ಶಾಂತಿ ಇರಬೇಕಾಗುತ್ತದೆ. ಜನರ ಸಮಸ್ಯೆಗಳು ಬಂದಾಗ ನಾವು ನಿಯಮಗಳ ಪ್ರಕಾರ ತಮ್ಮ ಅನುಮತಿ ಪಡೆದು ಸರ್ಕಾರದವರು ಗಮನಕ್ಕೆ ತರಬೇಕಾಗುತ್ತದೆ. ಅದು ನಮ್ಮ ಕೆಲಸ. ಹಾಗೆ ಏನಾದರೂ ಅನುಮತಿ ಕೊಡದಿದ್ದಾಗ ನಾವು ನಿಯಮಾವಳಿಗಳನ್ನು ಉಲ್ಲಂಘಿಸುತ್ತೇವೆ ಆಗ ನಾವು ಸ್ವಲ್ಪ ಕಠೋರವಾಗಿ ವರ್ತಿಸಬೇಕಾಗಿ ಬರುತ್ತದೆ, ಆಗ ತಾವು ನಮ್ಮ ಕಡೆಗೆ ಇರಬೇಕಾಗುತ್ತದೆ. ಇದಕ್ಕೆ ಹೊಣೆಗಾರರು ಆಳುವ ಪಕ್ಷದವರು, ಅವರು ದಾರಿ ತಪ್ಪಿದಾಗ ಅವರನ್ನು ದಾರಿಗೆ ತರಬೇಕಾಗುತ್ತದೆ ಮತ್ತೆ ಅಧ್ಯಕ್ಷರೇ ಇವತ್ತು ಈ ಸದನಗಳ ಬಗ್ಗೆ ಜನರಿಗೆ ಗೌರವ ಕಡಿಮೆಯಾಗುತ್ತಿದೆ ಇದು ದುರಾದೃಷ್ಟಕರವಾದ ಪರಿಸ್ಥಿತಿ. ಆದುದರಿಂದ ಆ ಗೌರವ ಮೊದಲಿದ್ದ ಹಾಗೆ ಇರುವಂತೆ ನೋಡಿಕೊಳ್ಳಬೇಕಾದ್ದು ತಮ್ಮ ಕರ್ತವ್ಯ ಮತ್ತು ಸಂದರ್ಭ ಬಂದರೆ ಸರ್ಕಾರದವರ ಕಿವಿ ಹಿಂಡಬೇಕಾದದ್ದು ತಮ್ಮ ಕೆಲಸ. ತಪ್ಪು ಮಾಡಿದವರನ್ನು ಸರಿಯಾದ ಮಾರ್ಗಕ್ಕೆ ತರಬೇಕಾಗುತ್ತದೆ. ಆ ರೀತಿ ಮಾಡಿ ನಮ್ಮೆಲ್ಲರ ಸಹಕಾರ ಪಡೆದುಕೊಂಡು ನಿಷ್ಪಕ್ಷಪಾತವಾಗಿ ಮತ್ತು ದೃಢವಾದ ನಿಲುವನ್ನು ತಾಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆ ರೀತಿ ನಿಲುವನ್ನು

ತಾಳತಕ್ಕ ಶಕ್ತಿ ತಮಗಿದೆ. ನನ್ನ ನಿಮ್ಮ ವೈಯುಕ್ತಿಕವಾದ ಸಂಬಂಧದ ಬಗ್ಗೆ ಇಲ್ಲಿ ಹೇಳುವುದಿಲ್ಲ. ಏತಕ್ಕೆಂದರೆ ನಾವು ನೀವು ಬಹಳ ಹಳೆಯ ಸ್ನೇಹಿತರು, ಆದರೆ ಈ ಸ್ಥಾನದಿಂದ ಈಗ ವಿರೋಧ ಪಕ್ಷದ ವಕ್ತಾರನಾಗಿ ನಾವು ಒಮ್ಮೊಮ್ಮೆ ಅಕಸ್ಮಾತ್ ಆಗಿ ನಿಮ್ಮ ಮಾತನ್ನೂ ಮೀರತಕ್ಕ ಪ್ರಸಂಗ ಬಂದರೆ ಅದಕ್ಕೆ ನಾವು ಜವಾಬ್ದಾರರಲ್ಲ ಸರ್ಕಾರದವರೇ ಜವಾಬ್ದಾರರೆಂದು ಹೇಳಬಯಸುತ್ತೇನೆ. ಇಷ್ಟು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಜಿ. ಕೊಡಗಿ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಈವತ್ತು ಈ ಒಂದು ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದುದಕ್ಕಾಗಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಆದರೆ ಒಂದು ಪ್ರಶ್ನೆ ಕೇಳಬಹುದು. ಅವಿರೋಧವಾಗಿ ಆಯ್ಕೆಯಾಗುವುದು ಗೊತ್ತಿದ್ದೂ ಕೂಡ ವಿರೋಧ ಪಕ್ಷದವರು ನನ್ನನ್ನು ಅಭ್ಯರ್ಥಿಯಾಗಿ ಸೂಚನೆ ಮಾಡಿದರು, ಏತಕ್ಕೆ ಮಾಡಬೇಕಾಗಿತ್ತು ಎನ್ನುವ ಪ್ರಶ್ನೆ ಸ್ವಾಭಾವಿಕವಾಗಿ ಉದ್ಭವವಾಗುತ್ತದೆ. ಈ ಸ್ಥಾನದ ಮೇಲೆ ಏನಾದರೂ ಕಣ್ಣಿದ್ದು ಅಪೇಕ್ಷೆ ಪಟ್ಟಿದ್ದಿಲ್ಲ. ನಮ್ಮ ಪಕ್ಷದವರು ನನ್ನ ಹೆಸರನ್ನು ಸೂಚನೆ ಮಾಡುವಾಗ ಒಂದು ವೇಳೆ ಚುನಾವಣೆಯಾದರೆ ಏನಾಗುತ್ತದೆ ಎಂಬುವ ಸಂಪೂರ್ಣವಾದ ಚಿತ್ರ ಸಹ ಗೊತ್ತಿತ್ತು. ಹೀಗಿದ್ದರೂ ಕೂಡ ಇದು ಕೇವಲ ತಾತ್ವಿಕವಾಗಿ ಒಂದು ವಿಚಾರವನ್ನು ಪ್ರತಿಪಾದನೆ ಮಾಡುವುದಕ್ಕಾಗಿ ಮಾತ್ರ ನಮ್ಮ ವಿರೋಧ ಪಕ್ಷದವರು ನನ್ನ ಹೆಸರನ್ನು ಸೂಚನೆ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಪ್ರಜಾಪ್ರಭುತ್ವ ಸಿದ್ಧಾಂತವನ್ನು ನಿರ್ಮಾಣ ಮಾಡಬೇಕಾದ ಆಳುವ ಪಕ್ಷದವರು ವಿರೋಧ ಪಕ್ಷದವರನ್ನು ತಮ್ಮ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಈ ಒಂದು ಗೌರವಯುತವಾದ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗುವುದಕ್ಕೆ ಅವಕಾಶವಾಯಿತು. ಆದುದರಿಂದ ಕೇವಲ ತಾತ್ವಿಕವಾಗಿ ನನ್ನ ಹೆಸರನ್ನು ವಿರೋಧ ಪಕ್ಷದವರು ಸೂಚನೆ ಮಾಡಿದ್ದರು ಬಹುಶಃ ಒಂದು ವೇಳೆ ಏನಾದರೂ ಚುನಾವಣೆಯಾಗಿ ನಾನೇ ಗೆಲ್ಲುವ ಸೂಚನೆ ಇದ್ದಿದ್ದರೆ ನನ್ನ ಹೆಸರನ್ನು ಸೂಚನೆ ಮಾಡುತ್ತಿರಲಿಲ್ಲ, ಬೇರೆ ಇನ್ನು ಯಾರಿಗೋ ಹೊರಟು ಹೋಗುತ್ತಿತ್ತು ಆದುದರಿಂದ ಈ ಸ್ಥಾನ ನನಗೆ ದಕ್ಕುವುದಿಲ್ಲವೆಂದು ಗೊತ್ತಿದ್ದೂ ಮಾಡಿದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ.

MR. SPEAKER.—It is a betrayal of your leader.

† ಶ್ರೀ ಎ, ಜಿ. ಕೊಡಗಿ.—ಇದು ಬಹಳ ಪ್ರಾಮುಖ್ಯವಾದ ಸ್ಥಾನ. ಈ ಸ್ಥಾನಕ್ಕೆ ತಾವು ಅವಿರೋಧವಾಗಿ ಆಯ್ಕೆಯಾಗಿರುವುದು ಸಂತೋಷದ ವಿಚಾರ. ತಮಗೆ ಮಂತ್ರಿಗಳಾಗಿ, ರಾಜ್ಯದ ಪಕ್ಷದ ಅಧ್ಯಕ್ಷರಾಗಿ ಹಾಗೂ ಸಮಾಜ ಸೇವಕರಾಗಿ ಹಲವಾರು ವರ್ಷಗಳ ಕಾಲ ದುಡಿದ ಅನುಭವ ಇದೆ. ಅರ್ಹರಾದ ವ್ಯಕ್ತಿಗಳನ್ನು ಆ ಒಂದು ಸ್ಥಾನಕ್ಕೆ ಆಯ್ಕೆ ಮಾಡಬೇಕಾದುದು ಧರ್ಮ. ಅದಕ್ಕೆ ತಾವು ಪಾತ್ರರಾಗಿದ್ದೀರಿ. ಅನೇಕ ಸಂದರ್ಭಗಳಲ್ಲಿ ಚರ್ಚೆ ಮಾಡುವಾಗ ಕಾನೂನಿನ ಚೌಕಟ್ಟನ್ನು ಮೀರಿ ವರ್ತಿಸುವ ಪ್ರಸಂಗಗಳು ಬರುತ್ತವೆ. ಅಂಥ ಸನ್ನಿವೇಶಗಳಲ್ಲಿ ಸರಿಯಾದ ನಿರ್ಧಾರವನ್ನು ಕೈಗೊಂಡು ಸಭೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಆ ರೀತಿ ತಾವು ಕಾರ್ಯ ನಿರ್ವಹಿಸಬಲ್ಲಿರಿ ಎಂಬ ಸಂಪೂರ್ಣ ನಂಬಿಕೆ ನನಗೆ ಇದೆ. ತಮಗಿರತಕ್ಕ ಅರ್ಹತೆ, ಯೋಗ್ಯತೆ ಹಾಗೂ ಪ್ರಾಮಾಣಿಕತೆಯಿಂದ ತಾವು ಆ ಸ್ಥಾನಕ್ಕೆ ಅರ್ಹರಾಗಿದ್ದೀರಿ ಎಂದು ಮತ್ತೊಮ್ಮೆ ಹೇಳುತ್ತಾ, ತಾವು ಆ ಸ್ಥಾನಕ್ಕೆ ಇನ್ನೂ ಹೆಚ್ಚಿನ ಕಳೆಯನ್ನು ತಂದುಕೊಡುತ್ತೀರಿ, ಆ ಸ್ಥಾನದ ಘನತೆ ಗಾಂಭೀರ್ಯಗಳನ್ನು ಇನ್ನಷ್ಟು ಹೆಚ್ಚಿಸುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಹಿಂದೆ ಇದ್ದಂತಹ ಅನೇಕ ಮಂದಿ ಅಧ್ಯಕ್ಷರುಗಳು ಆ ಒಂದು ಸ್ಥಾನದ ಘನತೆ ಗಾಂಭೀರ್ಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದಕ್ಕಾಗಿ ಅವರುಗಳಿಗೆಲ್ಲ ನನ್ನ ಅಭಿನಂದನೆಗಳು. ನಾನು ಆ ಒಂದು ಸ್ಥಾನಕ್ಕೆ ಅಭ್ಯರ್ಥಿತನವನ್ನು ಸೂಚಿಸಿದ್ದು ಕೇವಲ ತಾತ್ವಿಕ ದೃಷ್ಟಿಯಿಂದ ಎಂಬ ಅಂಶವನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಾ, ತಮ್ಮ ಸಂಪೂರ್ಣ ಸಹಕಾರವನ್ನು ವಿರೋಧ ಪಕ್ಷಕ್ಕೆ ಕೊಡಬೇಕೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ವರ್ತಿಸಬೇಕೆಂದು ಕೇಳಿಕೊಂಡು, ತಮಗೆ ಮತ್ತೊಮ್ಮೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ,

† ಶ್ರೀ ಎಸ್. ಆರ್. ಬೊಮ್ಮಾಯಿ, (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ತಾವು ಒಮ್ಮತದಿಂದ ಚುನಾಯಿತರಾದುದಕ್ಕೆ ವಂದನೆಗಳನ್ನು ಸಲ್ಲಿಸುತ್ತಾ, ತಮಗೆ ಎಲ್ಲಕ್ಕಿಂತ ಹೆಚ್ಚಿನ ಒಂದು ಅನುಭವ ಇದೆ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಈ ಪೀಠವನ್ನು ಅಲಂಕರಿಸಿದ್ದಂತಹ ಹಿಂದಿನ ಅಧ್ಯಕ್ಷರಿಗಿಂತಲೂ ತಾವು ಹೆಚ್ಚಿನ ಅನುಭವಸ್ಥರು ಎಂದರೆ ತಪ್ಪಾಗಲಾರದು. ತಾವು ವಿರೋಧ ಪಕ್ಷದಲ್ಲಿ

ಅನೇಕ ವರ್ಷಗಳ ಕಾಲ ಶಾಸಕರಾಗಿ ಕೆಲಸ ಮಾಡಿದ್ದೀರಿ. ಆ ಮೇಲೆ ಅಧಿಕಾರ ರೂಢ ಪಕ್ಷಕ್ಕೆ ಹೋಗಿ ಮಂತ್ರಿಗಳಾಗಿ ಆ ಜವಾಬ್ದಾರಿಯನ್ನು ಕೂಡ ನಿರ್ವಹಿಸಿದ್ದೀರಿ. ಹೀಗಾಗಿ ವಿರೋಧ ಪಕ್ಷಗಳ ಒಂದು ಜವಾಬ್ದಾರಿ, ಹಾಗೂ ಹಕ್ಕು ಬಾಧ್ಯತಾ ಸರ್ಕಾರದ ಒಂದು ನಡವಳಿಕೆ ಬಗ್ಗೆ ಸಂಪೂರ್ಣ ಪಕ್ವವಾದ ಅನುಭವ ತಮಗೆ ಇದೆ. ಆ ಅನುಭವ ಈ ಸಭೆಯ ನಡವಳಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸಹಾಯಕವಾಗುತ್ತದೆ. ರಾಜ್ಯದ ಜನಜೀವನ, ಶ್ರೀ ಸಾಮಾನ್ಯನ ಸಮಸ್ಯೆಗಳನ್ನು ನಿಜವಾಗಿ ಪ್ರತಿಬಿಂಬಿಸತಕ್ಕ ಕಾನೂನು-ಕಾರ್ಯಗಳ ಚರ್ಚೆಗಳು ಈ ಸಭೆಯಲ್ಲಿ ನಡೆಯುವುದಕ್ಕೆ ತಾವು ಸಂಪೂರ್ಣವಾಗಿ ಅವಕಾಶ ಮಾಡಿಕೊಡುತ್ತೀರೆಂಬ ಮಾತನ್ನು ಹೇಳುತ್ತಾ, ಹಿಂದಿನ ಒಬ್ಬ ಶ್ರೇಷ್ಠ ಅಧ್ಯಕ್ಷರಾದ ಶ್ರೀಮಾನ್ ವೈಕುಂಠ ಬಾಳಿಗಾರವರು ಹೇಳಿದ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ನೆನಪಿಗೆ ತರಬಯಸುತ್ತೇನೆ. ಅದೇನೆಂದರೆ "The opposition must have its say; the Government must have its way." ಕೊನೆಯದಾಗಿ ಅವರು ಹೇಳಿದ್ದು ಏನೆಂದರೆ, ಯಾವುದೇ ಸಮಸ್ಯೆ ಮೇಲಾಗಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಲಿಕ್ಕೆ ಸಂಪೂರ್ಣ ಸ್ವಾತಂತ್ರ್ಯ ವಿರೋಧ ಪಕ್ಷಕ್ಕೆ ಇರಬೇಕು ಮತ್ತು ಅದೇ ಸಮಯದಲ್ಲಿ ಸರ್ಕಾರದ ಕಾರ್ಯಕಲಾಪಗಳು ಕೂಡ ಸುಗಮವಾಗಿ ನಡೆದುಕೊಂಡು ಹೋಗಬೇಕೆಂಬ ಮಾತನ್ನು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ ಅದನ್ನು ತಾವು ಗಮನದಲ್ಲಿಟ್ಟುಕೊಂಡಿರಬಹುದೆಂದು ನನ್ನ ನಂಬಿಕೆ. ಅವರು ಆ ಮಾತನ್ನು ಹೇಳಿದಾಗ ತಾವು ವಿರೋಧ ಪಕ್ಷದ ಸದಸ್ಯರಾಗಿ ನನ್ನ ಜೊತೆಯಲ್ಲಿ ಈ ಕಡೆ ಕುಳಿತಿದ್ದು ನನಗೆ ಚನ್ನಾಗಿ ನೆನಪಿದೆ. ತಮ್ಮಂತಹ ಒಬ್ಬ ಶ್ರೇಷ್ಠ ಹರಿಜನ ನಾಯಕರನ್ನು ಪುನಃ ಈ ಸ್ಥಾನಕ್ಕೆ ಆಯ್ಕೆ ಮಾಡಿದ್ದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳವರು ಮಾತನಾಡುತ್ತಾ ಒಂದೆರಡು ಮಾತುಗಳನ್ನು ಹೇಳಿದರು. ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ಸಂಪೂರ್ಣ ನಂಬಿಕೆಯನ್ನು ಇಟ್ಟು, ಜನತೆ ಅವರಿಗೆ ನೀಡಿದ ಬೆಂಬಲವನ್ನು ಅರಿತು ತಾವು ಪಕ್ಷಾಂತರ ಮಾಡಿದ ವಿಚಾರವನ್ನು ಮಾರ್ಮಿಕವಾಗಿ ಅವರು ಹೇಳಿದ್ದಾರೆ. ಈ ಸಮಯದಲ್ಲಿ ೧೯೬೯ರ ಅಥವಾ ೧೯೭೦ರಲ್ಲಿ ಅವ ಪಕ್ಷಾಂತರ, ಯಾವ ಕಾರಣಕ್ಕಾಗಿಯೋ ಆಗಿರಲಿ ಅದು ಮಹತ್ವದ್ದಲ್ಲ. ಇವತ್ತು ಪಕ್ಷಾತೀತವಾಗಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗತಕ್ಕ ಅವಕಾಶ ತಮಗೆ ಲಭಿಸಿದೆ. ಅದಕ್ಕೆ ತಕ್ಕ ಅನುಭವ, ಶಕ್ತಿ ಮತ್ತು ವಿಶ್ವಾಸ ತಮ್ಮಲ್ಲಿ ಇದೆ. ಆ ರೀತಿ ನಡೆಸಿಕೊಂಡು ಹೋಗುವಾಗ ವಿರೋಧ ಪಕ್ಷಕ್ಕೆ ಯಾವ ರೀತಿಯಾಗಿ ಪ್ರೀತಿ ವಿಶ್ವಾಸವನ್ನು ತೋರಿಸಿ ಅವಕಾಶ ಮಾಡಿಕೊಡಬೇಕೆಂಬುದರ ಬಗ್ಗೆ ನಾನೇನು ತಮಗೆ ಹೇಳಬೇಕಾಗಿಲ್ಲ. ಆ ರೀತಿ ನಡೆಸಿಕೊಂಡು ಹೋಗುತ್ತೀರೆಂಬ ಸಂಪೂರ್ಣ ನಂಬಿಕೆ ನನಗಿದೆ. ಆ ಒಂದು ಸತ್ ಸಂಪ್ರದಾಯವನ್ನು ಉಳಿಸಿಕೊಂಡು ಆ ಸ್ಥಾನದ ಗೌರವವನ್ನು ನಿಮ್ಮ ಕಾಲದಲ್ಲಿ ಇನ್ನೂ ಹೆಚ್ಚಿಸುತ್ತೀರೆಂದು ಹೇಳುತ್ತಾ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹಾರನಹಳ್ಳಿ ರಾಮಸ್ವಾಮಿ, (ಗಂಡಸಿ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ತಾವು ಈ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ನಾನು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಸಭೆಯ ಅಧ್ಯಕ್ಷ ಸ್ಥಾನ ಬಹಳ ಜವಾಬ್ದಾರಿಯುತವಾದುದು, ಗಾಂಭೀರ್ಯದಿಂದ ಕೂಡಿದ್ದು ಮತ್ತು ಅತ್ಯಂತ ಸಹನೆ ಇರಬೇಕಾದ ಸ್ಥಾನ. ದೇಶದ ನಾನಾ ಭಾಗಗಳಲ್ಲಿರತಕ್ಕ ಭಾವೋದ್ವೇಗಗಳು ಅನೇಕ ಸಲ ಈ ಸಭೆಯಲ್ಲಿ ಪ್ರತಿಬಿಂಬಿಸುತ್ತವೆ. ಮಾನ್ಯ ಸದಸ್ಯರುಗಳು ಜನಗಳ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಕೆಲವೊಮ್ಮೆ ನಿಯಮಗಳನ್ನು ಮೀರಿ ಹೋಗುವ ಪ್ರಸಂಗಗಳು ಬರುತ್ತವೆ. ಅಂಥ ಸಂದರ್ಭಗಳಲ್ಲೂ ಕೂಡ ತಾಳ್ಮೆಯಿಂದ ನಿಯಮಗಳನ್ನು ಮೀರದ ರೀತಿಯಲ್ಲಿ ಸಭೆಯನ್ನು ನಡೆಸಿಕೊಳ್ಳತಕ್ಕ ಮನೋಭಾವ ತಮಗೆ ಇದೆ ಎಂಬ ನಂಬಿಕೆಯನ್ನು ನಾವೆಲ್ಲ ಕಂಡುಕೊಂಡಿದ್ದೇವೆ. ನಿಮ್ಮ ನಡೆ ನುಡಿಗಳೆಲ್ಲ ಸಮಾಧಾನವಾಗಿ, ಶಾಂತಿಯುತವಾಗಿ ಎಲ್ಲರಿಗೂ ಪ್ರಿಯಕರವಾದ ರೀತಿಯಲ್ಲಿ ನಡೆದುಕೊಂಡು ಬಂದಿರುವುದನ್ನು ಸಾರ್ವಜನಿಕ ಜೀವನದಲ್ಲಿರತಕ್ಕ ನಾವೆಲ್ಲ ಕಂಡು ಕೊಂಡಿದ್ದೇವೆ. ಇಂಥ ಒಂದು ಭಾವನೆ, ವಿಚಾರ, ಕಾರ್ಯವಿಧಾನವನ್ನು ತಾವು ಇಟ್ಟುಕೊಂಡಿರುವುದರಿಂದ ಈ ಸಭೆಯಲ್ಲಿ ಅಧ್ಯಕ್ಷರಾಗಿ ಬಹಳ ಸಫಲವಾಗಿ ತಾವು ಕಾರ್ಯ ನಡೆಸುತ್ತೀರೆಂಬ ನಂಬಿಕೆ, ವಿಶ್ವಾಸ ನಮ್ಮೆಲ್ಲರಿಗೂ ಇದೆ. ಈ ಸಭೆಯ ಅಧ್ಯಕ್ಷ ಸ್ಥಾನಕ್ಕೆ ನೀವು ನಿಜಕ್ಕೂ ಭೂಷಣರಾಗಿದ್ದೀರಿ. ಭಗವಂತನ ಕರುಣೆ ಮತ್ತು ಈ ಸಭೆಯ ಎಲ್ಲ ಮಾನ್ಯ ಸದಸ್ಯರುಗಳ ಒಂದು ಒಳ್ಳೆಯ ಆಶಯ ತಮ್ಮ ಮೇಲೆ ಇರಲಿ ಎಂದು ಹಾರೈ

ಸುತ್ತಾ, ಎಲ್ಲರ ಸಹಕಾರ ಇದ್ದರೆ ಆ ಸ್ಥಾನ ಭೂಷಣವಾಗಿರುತ್ತದೆಂದು ಹೇಳಬಯಸುತ್ತೇನೆ. ಇಲ್ಲದಿದ್ದರೆ ಕಷ್ಟವಾಗುತ್ತದೆ. ಅಂಥ ಒಂದು ಸಹಕಾರವನ್ನು ಈ ಸಭೆಯ ಮಾನ್ಯ ಸದಸ್ಯರುಗಳೆಲ್ಲರೂ ಕೊಡಲಿ ಎಂದು ಹಾರೈಸುತ್ತಾ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI C. M. ARUMUGHAM (K.G.F).—Sir, permit me to congratulate you on your unanimous election as the Speaker of this House. You are the eighth Speaker to occupy the Chair. As has been expressed by others, this is a rare chance given to you to preside over this Assembly, Your experience in the legislature for the last 18 years will certainly help you to conduct the House. You are not only a member of the Assembly but you were also a member of the Cabinet, as a Minister for Parliamentary Affairs. That will certainly help you, and guide you to work as a Speaker. Sir, there were seven Speakers and you are the 8th person. And for the first time, a Scheduled Caste person was elected as a Speaker i e., Sri Venkataramana and I am glad that the Chief Minister Sri Gundu Rao has kept up the tradition of making a Scheduled Caste person. as presiding Officer of the Assembly. There must be some difference between you and the previous Speakers. I- should not be only presiding and conducting every time when we raise a point of order and saying that there is no point of order. I do not expect that from you. Sir, I have seen 4 Speakers. There must be difference between those Speakers and your self. From 1952 on wards, there were so many Law Ministers but all the Law Ministers have not been remembered except Dr. Badasaheb Ambedkar. You must be remembered as a Speaker. You must perform as a Speaker. When I or any other member raise a point of order, you must give the ruling and your ruling must be judicious. When we struggle, work hard and read and come and raise a point of order, we should not get the ruling that there is no point of order. Any person can do it but you must distinguish from them. Any person can become a Minister. You must prove that any person cannot become a Speaker. Sir, I feel happy that you will continue to be the Speaker till 1983 and contest again without other contestants and get yourself elected unanimously in the coming general election and come back as a Speaker. That is my desire. I want you to be a Speaker and not a minister.

SRI S. R. BOMMAI.—If the elections come early ?

SRI C. M. ARUMUGHAM —It will not come before 1983. so long as Sri Gundu Rao is the Chief Minister. Sir, when you were the Minister for Parliamentary Affairs, we have raised certain points that the Legislature Secretariat should be independent. I do not know somehow, it has not been independent. Kerala and in Bihar and also in Loksabha, the Legislature Secretariats are independent. You need not depend upon the Law Department. We see in you a strong

Speaker; we see in you a person who is qualified to be a Speaker; we see in you a person who looks as a Speaker. Therefore, please see that our Secretaiat becomes independent without depending upon the Law Department for everything. You must have the power and authority. Your Secretariat must be strong. You are the strong Speaker and make your Secretariat also very strong. Sir, Sri Sayanak said that I am a lonely member. I may seek, some times, a little more time. Please do not deny me that opportunity.

Well Sir, a Speaker is one who speaks little; seldom speaks. But sometimes we get a Speaker who always confronts the members. That should not be the tradition of Speakers. From what you have seen all these years, you must distinguish yourself as the best Speaker. Now we remember Sri Vaikunta Baliga as a good Speaker. He was giving the ruling reading. I know your happy I have gone through the 'Who is Who' your hobby is reading. Kindly read the proceedings of the United Kingdom's Parliament aud the Parliament of France, Canada and the Congress of U.S.A. I had seen the Speaker saying 'withdraw from the House' every time. Every now and then, he says 'withdraw from the House', or calls the Marshal to take the member out. I will give an instance; kindly do that and follow that as far as possible. In Canada if a member is to be named by the Speaker he takes a Sword and goes to the member and keeps it on his shoulder and says 'once, twice and thrice' and the member must withdraw. That is the rules of procedure af Canada Parliament. So far, no member has ever been asked to withdraw from the House. That is the tradition the Canadian Parliament has kept up. I want that tradition must be kept here. Please treat the opposition and the ruling, all alike. Kindly see committees function well. Kindly see the legislators' home is alright and see that we get telephone and other facilities. These are the things that the Speaker must look into and not only to come here and preside over. Do your duty as an administrator also. I do no want to say more because you know every thing. Kindly dintinguish yourself as Babasaheb Ambedkar did. You must be remembered all the time, as a Speaker who did well, and during the next election you must be unanimously elected and come back and occupy this Chair. That is my desire. Electing you as a Speaker is a feather in the cap of the Gnndu Rao Government. He has given 4 Cabinet Ministers to the members belonging to Scheduled Caste. You have maintained what Sri Deveraj Urs did, formerly. I know in 1957 there was only one SC man and he was a Minister for Municipality Now we have got this position also. On this day, I congratulate the Gundu Rao Government for giving us

adequate representation not only in the Cabinet but also has given the post of Presiding Officer. I hope you will keep up the dignity, decorum and decency of the House. Thank you very much.

SRI B. B. SAYANAK.—(The hon. member started speaking in Marathi)

(*Interrputions*)

ಶ್ರೀ ಪಂಪಾಪತಿ.—ಸ್ವಾಮಿ, ಇದು ಕರ್ನಾಟಕ. ಕನ್ನಡದಲ್ಲೇ ಮಾತನಾಡುವಂತೆ ತಿಳಿಸಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ. ಮಾನ್ಯ ಸಯನಕ್ ಅವರು ಮರಾಠಿಯಲ್ಲಿ ಮಾತನಾಡಿದರೂ ಸಂತೋಷಪಡಬೇಕಾಗಿದೆ. ಕೆಲವರು ಬಳಸುತ್ತಾರಲ್ಲ ಇಂಗ್ಲೀಷ್ ಆ ತರಹ ಇಂಗ್ಲೀಷ್ ಬಳಸಿ ಮಾತನಾಡುವುದು ಬೇಡ. ಮಾನ್ಯ ಸಯನಕ್ ಅವರು ಇಂಗ್ಲೀಷಿನಲ್ಲಿ ಮಾತನಾಡುವುದನ್ನು ಕೇಳುವುದಕ್ಕಿಂತ ಮರಾಠಿಯಲ್ಲಿ ಮಾತನಾಡುವುದನ್ನು ಕೇಳುವುದೇ ಒಳ್ಳೆಯದು.

ಶ್ರೀ ಜೆ.ಡಿ. ಸೋಮಪ್ಪ .— ಸ್ವಾಮಿ, ಇದು ಕನ್ನಡ ರಾಜ್ಯ. ಕನ್ನಡದಲ್ಲಿ ಮಾತನಾಡಲಿ.

† SRI B. B. SAYANAK (Belgaum).—Sir, I congratulate you on behalf of Maharashtra Ekikaran Samithi. You were a senior and seasoned Parlimentary Affairs Minister. I know that you will maintain the dignity and decorum of the House. You should protect the rights of the members of the opposition.

2-00 P.M.

I know that you are very soft. At the same-time yor are very harsh. I know one instance when you were the President of the Congress-I, I was fighting here and because of you I was suspended throughout the session. I know that case. Why I am repeating, it is to tell you that you must be impartial. You must be above party. Though I am fighting for Maharashtra-Karnataka, you must protect my rights and whenever I have got grievances, please exercise your best judgement and you must convince us. We are not adamant. I congratulate you again and wish you that you are the second Speaker during the 5 years. This is the first time during my period in the Assembly—one is Sri Venkataramana and the second is Sri Ranganath. It is a good thing that Sri Gundu Rao has given a chance to the Scheduled Caste person and we are proud of it. With this Sir, I again congratulate you and I wish a prosperous and a very efficient Speakership.

† ಶ್ರೀ ಸಿ.ಪಿ. ಚಂದ್ರೇಗೌಡ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ, ನಾಯಕರೇ ಮತ್ತು ಸ್ನೇಹಿತರೇ, ಈ ದಿವಸ ನನಗಂತೂ ತುಂಬಾ ಹೆಮ್ಮೆ ಮತ್ತು ಸಂತೋಷವಾಗಿದೆ. ಉತ್ತಮ ವ್ಯಕ್ತಿಯನ್ನು ನಾವು ಉನ್ನತ ಸ್ಥಾನಕ್ಕೇರಿಸಿದ್ದೇವೆಂದು ಆನಂದವೂ ಆಗಿದೆ. ಮಾನ್ಯ ರಂಗನಾಥ್ ಅವರ ಬಗ್ಗೆ ಅನೇಕ ಸ್ನೇಹಿತ ಸದಸ್ಯರು ಗುಣಗಾನ ಮಾಡಿದ್ದಾರೆ. ನಾನು ಮತ್ತು ಅವರು ೧೯೫೭ನೇ ಇಸವಿಯಿಂದ ಒಟ್ಟಿಗೆ ಕೆಲಸ ಮಾಡಿಕೊಂಡು ಬಂದಿದ್ದೇವೆ. ಅವರಲ್ಲಿ ಎಷ್ಟರಮಟ್ಟಿಗೆ ನಿಷ್ಪಕ್ಷಪಾತವಂತ ಗುಣಗಳಿವೆ ಎನ್ನುವುದನ್ನು ನಾನು ಪೂರ್ಣ ಅರಿತಿದ್ದೇನೆ. ಅವರು ಸರಳ ಸ್ವಭಾವದವರೂ, ಉತ್ತಮ ಸಂಸದೀಯ ಪಟುಗಳೂ ಮತ್ತು ಸಮಾಜವಾದಿಗಳಾಗಿದ್ದಾರೆ. ಅವರು ನಮ್ಮ ಜಿಲ್ಲೆಯ ಮೂಡಗೆರೆ ವಿಧಾನ ಸಭಾ ಕ್ಷೇತ್ರದಿಂದ

ಎರಡು ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಅದು ನನಗಂತೂ ಬಹಳ ಹೆಮ್ಮೆಯನ್ನುಂಟು ಮಾಡಿದೆ. ಈ ಸದನದಲ್ಲಿ ಅವರು ವಿರೋಧ ಪಕ್ಷದ ಸದಸ್ಯರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಹಾಗೆಯೇ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಮತ್ತು ಸಚಿವರಾಗಿ ಉತ್ತಮ ಸ್ಥಾನಗಳನ್ನು ಅಲಂಕರಿಸಿ ತಮ್ಮಲ್ಲಿರತಕ್ಕ ದಕ್ಷತೆಯನ್ನು ತೋರಿಸಿದ್ದಾರೆ ಇಂತಹ ವ್ಯಕ್ತಿಯನ್ನು ನಾವಿಂದು ಈ ಸದನದ ಅಧ್ಯಕ್ಷರನ್ನಾಗಿ ಪಡೆದಿರತಕ್ಕದ್ದು ನಮ್ಮ ಭಾಗ್ಯ ಮತ್ತು ಪುಣ್ಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅವರನ್ನು ಅವಿರೋಧವಾಗಿ ಆಯ್ಕೆಯಾಗಲು ಅವಕಾಶ ಮಾಡಿಕೊಟ್ಟ ವಿರೋಧ ಪಕ್ಷದವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ತಮ್ಮ ಕಾಲಾವಧಿಯಲ್ಲಿ ತಮಗೆ ಯಾರೂ ಕಾನೂನು ಹೇಳಿಕೊಡಬೇಕಾದ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ, ತಾವು ಉತ್ತಮ ವಾಗ್ಮಿಗಳಾಗಿ ಮತ್ತು ವಕೀಲರಾಗಿ ಅವೆಲ್ಲವನ್ನೂ ಅರೆದು ನುಂಗಿದ್ದೀರೆಂದು ತಿಳಿದುಕೊಂಡಿದ್ದೇನೆ. ಆದರಿಂದ, ಈ ಸಭೆಯ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವ ಶಕ್ತಿ ತಮ್ಮಲ್ಲಿದೆ ಎಂದು ತಿಳಿದಿದ್ದೇನೆ. ತಮ್ಮ ಕಾಲಾವಧಿಯಲ್ಲಿ ಈ ಸದನದ ಗೌರವವನ್ನು ತಾವು ಕಾಪಾಡುತ್ತೀರೆಂದು ನಂಬಿದ್ದೇನೆ. ತಮಗೆ ಸರ್ವ ರೀತಿಯಲ್ಲೂ ಭಗವಂತನು ಒಳ್ಳೆಯದನ್ನು ಕರುಣಿಸಲೆಂದು ತುಂಬು ಹೃದಯದಿಂದ ಹಾರೈಸುತ್ತೇನೆ.

† ಶ್ರೀ ಟಿ. ಚೌಡಯ್ಯ (ಭರಮಸಾಗರ). ಮಾನ್ಯ ಅಧ್ಯಕ್ಷರೇ, ಈ ದಿವಸ ತಾವು ಈ ಸದನದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದು ಬಹಳ ಸಂತೋಷದ ಮತ್ತು ಹೆಮ್ಮೆಯ ವಿಷಯ. ಈ ಸಂದರ್ಭದಲ್ಲಿ ತಮ್ಮನ್ನು ಮತ್ತು ಈ ಸದನದ ನಾಯಕರಾದ ಶ್ರೀ ಗುಂಡೂರಾಯರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ಇದಕ್ಕೆ ಕಾರಣ ಇಷ್ಟೆ : ೧೯೭೮ರಲ್ಲಿ ದಲಿತ ವರ್ಗದ ಶಾಸಕರಾದ ಶ್ರೀ ವೆಂಕಟರಮಣ ಅವರನ್ನು ಪ್ರಪ್ರಥಮವಾಗಿ ಈ ಸದನದ ಅಧ್ಯಕ್ಷರಾಗಿ ಆಯ್ಕೆ ಮಾಡಿ ಒಂದು ಸತ್ಸಂಪ್ರದಾಯವನ್ನು ಅಂದಿನ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸ್ ಅವರು ಹಾಕಿಕೊಟ್ಟಿದ್ದನ್ನು ಶ್ರೀ ಗುಂಡೂರಾಯರು ಉಳಿಸಿಕೊಂಡು ಮತ್ತು ಬೆಳೆಸಿಕೊಂಡು ಹೋಗುತ್ತಿದ್ದಾರೆ. ಈ ಸದನದಲ್ಲಿ ತಾವು ಇದ್ದ ೧೯ ವರ್ಷಗಳ ಕಾಲದಲ್ಲಿ ೧೦ ವರ್ಷಗಳ ಕಾಲ ವಿರೋಧಪಕ್ಷದಲ್ಲಿ ಮತ್ತು ೯ ವರ್ಷಗಳ ಕಾಲ ಆಡಳಿತ ಪಕ್ಷದಲ್ಲಿ ಕೆಲಸ ಮಾಡಿದ್ದೀರಿ. ಇದರ ಜೊತೆಗೆ ಸಮಾಜದ ಅನೇಕ ರಂಗಗಳಲ್ಲಿ ಮತ್ತು ಪಕ್ಷಗಳಲ್ಲಿ ಉನ್ನತ ಸ್ಥಾನದಲ್ಲಿ ಕೆಲಸ ಮಾಡಿದ್ದೀರಿ. ಈ ಹಿಂದೆ ತಾವು ಸಂಸದೀಯ ವ್ಯವಹಾರಗಳ ಸಚಿವರಾಗಿ ಹೆಚ್ಚು ಅನುಭವವನ್ನು ಪಡೆದಿರತಕ್ಕ ಕಾಲದಲ್ಲಿ ಆ ಅನುಭವ ಮತ್ತು ಪರಿಶ್ರಮವುಳ್ಳ ತಮ್ಮನ್ನು ಆಯ್ಕೆ ಮಾಡಿರುವುದು ನಮ್ಮ ದಲಿತ ಜನಾಂಗಕ್ಕೆ ಒಂದು ಕಿರೀಟಪ್ರಾಯವೆಂದು ಭಾವಿಸುತ್ತೇನೆ.

ಈ ಸಭೆಯಲ್ಲಿ ಕೆಲಸ ಮಾಡುವಾಗ ವಿರೋಧ ಪಕ್ಷಗಳ ಅಥವಾ ಯಾವುದೇ ಪಕ್ಷಗಳ ಸದಸ್ಯರು ಮಾತಿನ ಭರದಲ್ಲಿ ಬಿಸಿ ಚರ್ಚೆಗೆ ಇಳಿದಾಗ ತಾವು ಶಾಂತಿಯುತವಾಗಿ ಸದನವನ್ನು ನಿರ್ವಹಿಸುವುದಕ್ಕೆ ಮನಸ್ಸು ಮಾಡಬೇಕೆಂದು ನಾನು ವೈಯಕ್ತಿಕವಾಗಿ ಕೋರುತ್ತೇನೆ. ಏಕೆಂದರೆ, ತಾವು ಎಷ್ಟು ಗಂಭೀರವಾಗಿ ಮತ್ತು ಶಾಂತಿಯುತವಾಗಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುತ್ತೀರಿ ಅಷ್ಟೇ ಫಲಪ್ರದವಾಗಿ ಈ ಸಭೆಯ ಕಾರ್ಯಕಲಾಪಗಳು ಪರಿಣಾಮದಲ್ಲಿ ರೂಪುಗೊಳ್ಳುತ್ತವೆ. ಇದೆಲ್ಲ ಹೆಚ್ಚು ತಮ್ಮನ್ನೇ ಅವಲಂಭಿಸಿರುವುದರಿಂದ ತಾವು ಹೆಚ್ಚು ಅಧ್ಯಯನ ಮಾಡಿ, ಸಂಸದೀಯ ವ್ಯವಹಾರಗಳ ಬಗ್ಗೆ ಹೆಚ್ಚು ಅನುಭವವನ್ನು ಪಡೆದು, ಶ್ರೀಮಾನ್ ವೈಕುಂಟಬಾಳಿಗಾ ಅವರಂಥ ಹಿರಿಯರು ಈ ಅಧ್ಯಕ್ಷ ಪೀಠವನ್ನು ಅಲಂಕರಿಸಿ, ಈ ಸಭೆಯ ಗೌರವವನ್ನು ಕಾಪಾಡಿರುವಂತೆ ತಾವೂ ಕೂಡ ಹೆಚ್ಚಿನ ಮಟ್ಟದಲ್ಲಿ ಸದನದ ಗೌರವವನ್ನು ಕಾಪಾಡಲು ಶ್ರಮಿಸುತ್ತೀರೆಂದು ನಂಬಿದ್ದೇನೆ. ತಮಗೆ ಇನ್ನೂ ಎರಡು ವರ್ಷಗಳ ಕಾಲ ಈ ಸದನದ ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ಅವಕಾಶವಿರುವುದರಿಂದ ತಾವು ತಮ್ಮೆಲ್ಲ ಅನುಭವಗಳನ್ನೂ ಮೈಗೂಡಿಸಿಕೊಂಡು ಹೆಚ್ಚು ದಕ್ಷತೆಯಿಂದ ಕೆಲಸ ನಿರ್ವಹಿಸುತ್ತೀರೆಂಬ ನಂಬಿಕೆ ನನಗಿದೆ ಮಾನ್ಯ ಪಾಟೀಲರು ಹೇಳಿದ ಹಾಗೆ ಶ್ರೇಷ್ಠ ಸ್ಥಾನದಲ್ಲಿ ಕುಳಿತು ಕೆಲಸ ಮಾಡತಕ್ಕ ತಮಗೆ ಒಂದು ಜವಾಬ್ದಾರಿ ಇದೆ. ಅದಕ್ಕೆ ನನಗೊಂದು ಮಾತು ಜ್ಞಾಪಕಕ್ಕೆ ಬರುತ್ತಿದೆ.

“ಯದ್ ಯದ್ ಆಚರತಿ : ಶ್ರೇಷ್ಟ :
ತತ್ ತತ್ ವಿವೇತರೋಜನಾ :
ಸಯತ್ ಪ್ರಮಾಣಂ ಕುರುತೇ
ಲೋಕಸ್ತದನುವರ್ತತೆ”

ಎಂದು ಒಂದು ಶ್ಲೋಕ ಗೀತೆಯಲ್ಲಿ ಬರುತ್ತದೆ. ಶ್ರೇಷ್ಠರಾಗಿರತಕ್ಕವರು ಯಾವ ಯಾವ ರೀತಿ ವರ್ತಿಸುತ್ತಾರೋ ಮತ್ತು ಆಚರಿಸುತ್ತಾರೋ ಅದೇ ರೀತಿ ಲೋಕ, ಎಂದರೆ ಅವರ ಅನುಯಾಯಿಗಳು ಅದನ್ನನುಸರಿಸುತ್ತಾರೆ; ಶ್ರೇಷ್ಠರಾಗಿರುವವರ ನಡವಳಿಕೆಗಳು ಅವರ ಅನುಯಾಯಿಗಳಿಗೆ ಪ್ರಮಾಣಬದ್ಧವಾಗಿರುತ್ತವೆ. ಆದುದರಿಂದ, ತಮ್ಮ ನಡವಳಿಕೆಗಳು ಆದರ್ಶಪ್ರಾಯವಾಗಿ ನಮಗೆ ಮಾರ್ಗದರ್ಶನ ರೂಪದಲ್ಲಿರುವುದಕ್ಕೆ ಅವಕಾಶವಿದೆ. ಅಂತಹ ಶ್ರೇಷ್ಠ ಸ್ಥಾನವನ್ನು ತಾವು ಅಲಂಕರಿಸಿದ್ದೀರಿ. ತಮ್ಮ ಮಾರ್ಗದರ್ಶನ ನಮಗೆ ಅವಶ್ಯವಾಗಿ ಬೇಕಾಗುತ್ತದೆ. ತಾವು ಸುಮಾರು ಹತ್ತು ವರ್ಷಗಳ ಕಾಲ ವಿರೋಧ ಪಕ್ಷದಲ್ಲಿ ಕೆಲಸ ಮಾಡಿರುವುದರಿಂದ ತಮ್ಮ ಅನುಕಂಪ ಮತ್ತು ಮಮತೆ ವಿರೋಧ ಪಕ್ಷಗಳ ಕಡೆ ಹೆಚ್ಚು ಇರಲೆಂದು ಕೇಳಿಕೊಂಡು, ಯಾವುದೇ ಕಾರಣದಿಂದ ಈ ಸಭೆಯ ಗೌರವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ತಾವು ಈ ಸದನವನ್ನು ನಡೆಸಿಕೊಂಡು ಹೋಗುತ್ತೀರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಟಲ್).—ಮಾನ್ಯ ಅಧ್ಯಕ್ಷರೇ, ತಾವು ಈ ಸದನದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವುದಕ್ಕೆ ಸಂತೋಷಪಡುವವರಲ್ಲಿ ನಾನೂ ಒಬ್ಬ. ಈ ಸದನದ ಅಧ್ಯಕ್ಷ ಪೀಠ ಪ್ರಜಾಪ್ರಭುತ್ವದಲ್ಲಿ ಬಹಳ ಮಹತ್ವ ಇರುವಂತ ಪೀಠ. ತಮ್ಮನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದರಲ್ಲಿ ಪ್ರಥಮ ವ್ಯಕ್ತಿಯಾಗಿರುವ ಮಾನ್ಯ ಮುಖ್ಯ ಮಂತ್ರಿಯವರನ್ನು ನಾನು ಪ್ರತ್ಯೇಕವಾಗಿ ಅಭಿನಂದಿಸುತ್ತೇನೆ. ಏತಕ್ಕೆಂದರೆ, ಈ ಸ್ಥಾನಕ್ಕೆ ಬಹಳ ಯೋಗ್ಯರಾದವರನ್ನು ಆಯ್ಕೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ. ಈ ಸ್ಥಾನದಲ್ಲಿದ್ದವರು ಮಂತ್ರಿಪದವಿಗೆ ಅಪೇಕ್ಷೆ ಮಾಡಿದಾಗ, ಅವರನ್ನು ಮಂತ್ರಿಗಳನ್ನಾಗಿ ಮಾಡಿ. ತಮ್ಮನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಿರುವುದಕ್ಕಾಗಿ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ಸ್ಥಾನದ ಗೌರವವನ್ನು ಕಾಪಾಡುವುದು ತಮ್ಮ ಕೈಯಲ್ಲಿದೆ. ಈ ಸ್ಥಾನದಲ್ಲಿ ಕುಳಿತವರು ಮಂತ್ರಿ ಪದವಿ ಮಹತ್ವ ಎಂದು ತಿಳಿದುಕೊಂಡಿರುವುದಕ್ಕೆ ನಾನು ವ್ಯಸನ ಪಡಬೇಕಾಗಿದೆ. ಈ ವಿಚಾರವನ್ನು ಅಷ್ಟಕ್ಕೆ ಬಿಡುತ್ತೇನೆ.

ತಾವು ನಡು ಹರೆಯದಲ್ಲಿದ್ದರೂ ಬಹಳ ಅನುಭವಿಗಳಾಗಿದ್ದೀರಿ. ಕಳೆದ ೧೮ ವರ್ಷಗಳಿಂದಲೂ ಈ ಸದನದ ಸದಸ್ಯರಾಗಿ, ಮಂತ್ರಿಗಳಾಗಿ ಸಾಕಷ್ಟು ಅನುಭವವನ್ನು ಪಡೆದಿದ್ದೀರಿ. ತಮ್ಮ ಉತ್ಸಾಹ ಮತ್ತು ಶಕ್ತಿಯನ್ನು ಈ ಸದನದ ಅಧ್ಯಕ್ಷರಾಗಿ ರಾಜ್ಯದ ಜನತೆಯ ಆಸೆ ಆಕಾಂಕ್ಷೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಉಪಯೋಗಿಸಿಕೊಳ್ಳುತ್ತೀರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಭಾರತ ಮತ್ತು ರಷ್ಯಾ ಸಾಂಸ್ಕೃತಿಕ ಸಂಘದ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ವಿಯಟ್ನಾಂ ಮತ್ತು ಕಾಂಪೂಚಿಯಾ ರಾಷ್ಟ್ರಗಳನ್ನು ಸಂದರ್ಶಿಸಿ ಬಂದಿದ್ದೀರಿ. ಸಂದರ್ಶನದ ಫಲವಾಗಿ ಭಾರತ, ರಷ್ಯಾ ಮತ್ತು ಕಾಂಪೂಚಿಯ ಜನತೆಗೆ ಬೆಂಬಲದ ಅಂಗೀಕಾರಕ್ಕೆ ಅಂತರಾಷ್ಟ್ರೀಯ ಕ್ಷೇತ್ರಗಳಲ್ಲಿಯೂ ಕೂಡ ಮನ್ನಣೆಗೆ ಅವಕಾಶವಾಯಿತು. ಇದರಲ್ಲಿ ತಮ್ಮ ಮಹತ್ತರ ಪಾತ್ರವನ್ನು ಇಂದು ಸ್ಮರಿಸಬೇಕಾಗುತ್ತದೆ. ತಾವು ಅಧ್ಯಕ್ಷ ಸ್ಥಾನದಲ್ಲಿದ್ದುಕೊಂಡು ವಿರೋಧ ಪಕ್ಷದವರ ಬಗ್ಗೆ ಕಟ್ಟುನಿಟ್ಟಿನ ಕಾನೂನು ಜಾರಿ ಮಾಡದೆ, ಅವರ ಬಗ್ಗೆ ಅನುಕಂಪ ಇಟ್ಟುಕೊಳ್ಳುತ್ತೀರೆಂದು ಭಾವಿಸುತ್ತೇನೆ. ಆಡಳಿತ ಪಕ್ಷಕ್ಕಿಂತ ವಿರೋಧಪಕ್ಷದವರು ಜನತೆಯ ಅಭಿಪ್ರಾಯಗಳನ್ನು ಇಲ್ಲಿ ಹೇಳಬೇಕಾಗುತ್ತದೆ. ತಮ್ಮ ಕಾಲದಲ್ಲಿ ನಮ್ಮ ಪಕ್ಷದ ಪರವಾಗಿ ಹಾಗೂ ವಿರೋಧ ಪಕ್ಷದ ಪರವಾಗಿ ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟು ತಮಗೆ ಶುಭವಾಗಲಿ ಎಂದು ಹರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. Bhaskar Naidu.—Mr. Speaker Sir, I congratulate you and also the Chief Minister. I am thankful to the Opposition members that they had cooperated in electing you unanimously as Speaker of the House which position you deserve. Some people might have claimed and felt happy that you belong to Scheduled Caste As far as I am concerned you belong to the humanity. You are our man. You are man of justice. I only pray God to give you strength to do justice without any fear or favour. May God bless you.

ಶ್ರೀಮತಿ ಅನುಸೂಯ ಗಜಾನನ ಶರ್ಮ (ಅಂಕೋಲ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಹಿಳೆಯರ ಸಂಖ್ಯೆ ತೀರಾ ಕಡಿಮೆಯಾಗಿದೆ. ಇರತಕ್ಕವರಲ್ಲಿ ಒಬ್ಬರನ್ನು ತೆಗೆದುಕೊಂಡು ಬಡವರಾಗಿದ್ದೇವೆ. ಈ ಸದನದಲ್ಲಿ ನಮ್ಮ ಅನುಭವ ತೀರಾ ಚಿಕ್ಕದಾದದ್ದು. ತಾವು ಮಂತ್ರಿಯಾಗಿದ್ದಾಗ ನಾನು ಎದುರು ಪಕ್ಷದ ಶಾಸಕಿಯಾಗಿ ತಮ್ಮ ಸ್ವಭಾವ ಮತ್ತು ಯೋಗ್ಯತೆಯನ್ನು ಅರಿತಿದ್ದೇನೆ. ತಾವು ಮುಂದೆ ಕೂಡ ಮಹಿಳಾ ಶಾಸಕರಿಗೆ ರಕ್ಷಣೆ ಕೊಡುವುದರಲ್ಲಿ ಮುಂದಾಗುತ್ತೀರೆಂದು ನಂಬಿರುತ್ತೇನೆ. ನಮಗೆ ತಮ್ಮಿಂದ ರಕ್ಷಣೆ ಸಿಗುತ್ತದೆಂಬ ಭರವಸೆ ನಮಗಿದೆ. ತಮ್ಮನ್ನು ಮಹಿಳಾ ಸದಸ್ಯರ ಪರವಾಗಿ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸನ್ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ತಾವು ಅವಿರೋಧವಾಗಿ ಆಯ್ಕೆ ಆಗಿ ಈ ಮಾನ್ಯ ಸಭೆಯ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿರುವುದು ನಮಗೆಲ್ಲರಿಗೂ ಬಹಳ ಸಂತೋಷವನ್ನುಂಟು ಮಾಡಿದೆ. ಅದರಲ್ಲೂ ಕೂಡ ವೈಯಕ್ತಿಕವಾಗಿ ನನಗೆ ಆಗಿರುವಷ್ಟು ಸಂತೋಷವನ್ನು ಯಾವ ರೀತಿ ಹೇಳಬೇಕು ಎನ್ನುವುದೇ ನನಗೆ ಗೊತ್ತಾಗುವುದಿಲ್ಲ. ಕಾರಣ, ಕಳೆದ ಎರಡು ದಶಕಗಳಿಂದಲೂ ತಮ್ಮನ್ನು ಅತಿ ಹತ್ತಿರದಿಂದ ತಮ್ಮ ವ್ಯಕ್ತಿತ್ವವನ್ನು ಕಂಡವರಲ್ಲಿ ನಾನು ಒಬ್ಬ. ಕಾಕತಾಳಿ ನ್ಯಾಯವೋ ಎಂಬಂತೆ ತಾವು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದಾಗ ನಾನು ಪ್ರಧಾನ ಕಾರ್ಯದರ್ಶಿಯಾಗಿದ್ದೆ. ತಾವು ವ್ಯವಸಾಯ ಮತ್ತು ಪಾರ್ಲಿಮೆಂಟರಿ ಮಂತ್ರಿಗಳಾಗಿದ್ದಾಗ ನಾನು ಇಲ್ಲಿ ಮುಖ್ಯ ಸಚೇತಕನಾಗಿದ್ದೆ. ಜನಪ್ರಿಯ ಮುಖ್ಯ ಮಂತ್ರಿಗಳಾದ ಮಾನ್ಯ ಗುಂಡೂರಾಯರ ಕಾಲದಲ್ಲಿ ತಾವು ಈ ಉನ್ನತ ಪೀಠವನ್ನು ಅಲಂಕರಿಸಿರುವ ಸಂದರ್ಭದಲ್ಲಿ ನನ್ನನ್ನು ಮುಖ್ಯ ಸಚೇತಕನನ್ನಾಗಿ ಮಾಡಿದ್ದಾರೆ. ಅಂತೂ ತಮ್ಮ ಅಪಾರವಾದ ವೈವಿಧ್ಯತೆ, ಕಳೆದ 20 ವರ್ಷಗಳಲ್ಲಿ ಈ ಸಭೆಯಲ್ಲಿ ನಡೆದ ನಡವಳಿಕೆಗಳು ತಿಳಿದುಕೊಂಡಿರುವ ವಿಷಯಗಳು ಮುಂದಿನ ವರ್ಷಗಳಲ್ಲಿ ಹಿಂದೆ ಇದ್ದಂತ ವಿಧಾನ ಸಭೆಯ ಅಧ್ಯಕ್ಷರುಗಳಿಗೆ ಮಾದರಿಯಾಗಿರುವಂತೆ ನಡೆದುಕೊಳ್ಳುವ ಶಕ್ತಿಯನ್ನು ದೇವರು ತಮಗೆ ಕೊಡಲೆಂದು ಪ್ರಾರ್ಥಿಸಿ ಈ ಶುಭ ಸಂದರ್ಭದಲ್ಲಿ ತಮಗೆ ಒಳ್ಳೆಯದಾಗಲೆಂದು ಹಾರೈಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ತಾವು ವಿಧಾನ ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿರುವುದು ನಮಗೆ ಬಹಳ ಸಂತೋಷ. ಕಾರಣ ತಾವು ನಮ್ಮ ಊರಿನವರು ಮತ್ತು ನಮ್ಮ ಜಿಲ್ಲೆಯವರು, ಆದ್ದರಿಂದ ನಮಗೆ ತುಂಬಾ ಸಂತೋಷ. ತಾವು ಸಮಾಜವಾದಿಗಳು ಸಮಾಜವಾದಿ ರಾಷ್ಟ್ರಗಳನ್ನು ನೋಡಿ ಬಂದಿರತಕ್ಕವರು, ಸಮಾಜವಾದದ ದಿಕ್ಕಿನಲ್ಲಿ ಯೋಚನೆ ಮಾಡತಕ್ಕವರು. ಈಗಾಗಲೇ ತಾವು ವಿರೋಧ ಪಕ್ಷದಲ್ಲಿ ಅನುಭವ ಪಡೆದಿದ್ದೀರಿ, ಆಡಳಿತ ಪಕ್ಷದಲ್ಲಿ ಅಧಿಕಾರ ನಡೆಸಿ ಅನುಭವ ಇದೆ, ತಮಗೆ ಎಲ್ಲಾ ಅನುಭವ ಇರುವುದರಿಂದ ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಚುನಾಯಿಸಲು ನಮ್ಮ ವಿರೋಧ ಪಕ್ಷದ ಉಪ ನಾಯಕರು ಮಾಡಿಕೊಟ್ಟ ಅವಕಾಶಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅವಿರೋಧವಾಗಿ ಚುನಾಯಿಸುವುದು ಬಹಳ ಒಳ್ಳೆಯದು ಸಂತೋಷ. ಇವೊತ್ತು ನಮ್ಮದು ಕರ್ನಾಟಕ, ಕನ್ನಡನಾಡು ಈ ಕರ್ನಾಟಕ ವಿಧಾನ ಸಭೆಯಲ್ಲಿ ನಡೆಯತಕ್ಕ ಎಲ್ಲಾ ಕಾರ್ಯ ಕಲಾಪಗಳು ಕೂಡ ಕನ್ನಡದಲ್ಲಿ ನಡೆಯ ಬೇಕಾದ್ದು ಅಗತ್ಯ. ಆದರೆ ಇದುವರೆಗಿನ ಎಲ್ಲಾ ಕಾರ್ಯ ಕಲಾಪಗಳು ಆಂಗ್ಲ ಭಾಷೆಯಲ್ಲಿ ನಡೆಯುತ್ತಿದ್ದೆ, ಆದ್ದರಿಂದ ತಾವು ತಮ್ಮ ಕಾಲದಲ್ಲಿಯಾದರೂ ಈ ಕರ್ನಾಟಕ ವಿಧಾನ ಸಭೆಯಲ್ಲಿ ನಡೆಯಬೇಕಾದಂಥ ಎಲ್ಲಾ ಕಾರ್ಯ ಕಲಾಪಗಳನ್ನು ಕನ್ನಡದಲ್ಲೇ ನಡೆಸುವುದಕ್ಕೆ ತಾವು ಪ್ರಯತ್ನ ಪಡಬೇಕು, ಆ ದಿಕ್ಕಿನಲ್ಲಿ ತಾವು ಯಶಸ್ಸನ್ನು ಪಡೆಯಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಈ ದಿವಸ ತಾವು ವಿಧಾನ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಚುನಾಯಿತರಾಗಿದ್ದಕ್ಕೆ ನನ್ನ ಪರವಾಗಿ ಮತ್ತು ನನ್ನ ಕ್ಷೇತ್ರದ ಜನತೆಯ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI AZIZ SAIT (Narasimharaja).—Mr. Speaker sir, it is usual in this world that when somebody is elevated, people congratulate and felicitate him and when somebody dies we mourn it whether he is good or bad we speak only of good things. But my association with you in the legislature life is since 1960, when I was in the Legislative

Council and you were elected to Assembly in 1962. I hope you have seen speakers and Chairmen as much as I have seen right from the time of Sri S. R. Kanti followed by Sri Vaikunta Baliga and then followed by Sri S. D. Kothavale, Smt. Nagarathnamma and then Sri P. Venkataraman, the Minister for Social Welfare. I only want to remind you, Sir, as a constitutional advocate and as an opposition member, you have raised a number of privilege issues and a number of points of order. While giving ruling, please bear in mind to uphold the dignity of the House. I know, sir, wherever you are, to whichever party you belong from today you are free from all encumbrances. I hope you are going to resign from your party either today or tomorrow. Just now the hon. Member Shri Pampapati told that you belong to his district and so he expects more justice from you. We are in a minority and we require more justice. I hope you will uphold justice and give a lead to others. I want to remind you one thing, I remember even now Sri B. Vaikunta Baliga's last ruling. He had upheld the dignity of this House and he was one of the few Speakers in the country. I am sure, sir, that you will have the same historic approach and do justice. I wish you all the best. May God bless you.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರ ವಿಶ್ವಾಸಕ್ಕೆ ಪಾತ್ರರಾಗಿ ಈ ದಿವಸ ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವ ಬಗ್ಗೆ ನಮ್ಮ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಈ ಅಧ್ಯಕ್ಷ ಸ್ಥಾನಕ್ಕೆ ಬೇಕಾದ ಎರಡು ಮೂಲ ಗುಣಗಳು ಅಂದರೆ ಅಪಾರವಾದ ತಾಳ್ಮೆ ಅಗಾಧವಾದ ಜಾಣ್ಮೆ. ತಮ್ಮಲ್ಲಿ ಅಪಾರವಾದ ತಾಳ್ಮೆ ಇದೆ, ಅಗಾಧವಾದ ಜಾಣ್ಮೆ ಇದೆ. ಈ ಎರಡರ ಆಧಾರದ ಮೇಲೆ ಈ ಸದನದ ಕಾರ್ಯ ಕ್ರಮವನ್ನು ಯಶಸ್ವಿಯಾಗಿ ನೆರವೇರಿಸಬಲ್ಲಿರಿ ಎಂಬ ವಿಶ್ವಾಸ ನಮಗೆ ಇದೆ. ಈ ದಿವಸ ಹಿಂದುಳಿದ ಜನಾಂಗದಲ್ಲಿ ಹುಟ್ಟಿ ಬಂದಂಥ ಒಬ್ಬ ವ್ಯಕ್ತಿಯಾಗಿ ಇಂತಹ ಒಂದು ಅಗ್ರಸ್ಥಾನವನ್ನು ಸ್ವೀಕಾರ ಮಾಡಿರತಕ್ಕದ್ದು ನಮ್ಮೆಲ್ಲರಿಗೂ ಸಂತೋಷದ ಸಂಗತಿ. ನಮ್ಮ ಡಾಕ್ಟರ್ ತಿಮ್ಮೇಗೌಡರು ಪ್ರಸ್ತಾಪ ಮಾಡುತ್ತಾ ಇವೊತ್ತಿನ ದಿವಸ ಹುತಾತ್ಮರ ದಿನಾಚರಣೆಯ ದಿವಸ, ಸರ್ವೋದಯದ ದಿನಾಚರಣೆಯ ದಿವಸ ಶುಭ ದಿವಸ ಎಂದು ಹೇಳಿದರು.

ಅಧ್ಯಕ್ಷರು.—ಇವೊತ್ತು ಶುಕ್ರವಾರ.

ಶ್ರೀ ಹೆಚ್. ಗಂಗಾಧರನ್.—ಅಧ್ಯಕ್ಷರೆ, ಎಲ್ಲಾ ದೃಷ್ಟಿಯಿಂದಲೂ ಈ ದಿವಸ ಒಂದು ಶೋಭಾಯಮಾನವಾದ ದಿನವಾಗಿದೆಯೆಂದು ಈ ಸದನದ ಎಲ್ಲ ಮಿತ್ರರು ಹೇಳಿದ್ದಾರೆ. ಅಧ್ಯಕ್ಷರೆ, ತಾವು ತಮ್ಮ ವ್ಯವಹಾರದಲ್ಲಿ ಎರಡು ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಒಂದು ಸದನದ ಒಳಗೆ ಮಾಡತಕ್ಕ ಕೆಲಸ. ಇಲ್ಲಿ ಅನಾವಶ್ಯಕವಾಗಿ ಕಾಲಹರಣವಾಗದಂತೆ ಅವಶ್ಯಕವಾದ ವಿಚಾರಗಳು ಕೂಲಂಕಷವಾಗಿ ಚರ್ಚೆಯಾಗುವ ರೀತಿಯಲ್ಲಿ ವ್ಯವಸ್ಥೆ ಮಾಡುವ ಜವಾಬ್ದಾರಿ ತಮಗೆ ಇರುತ್ತದೆ. ಅದನ್ನು ಯಶಸ್ವಿಯಾಗಿ ನೆರವೇರಿಸಬಲ್ಲಿರಿ ಎಂಬ ವಿಶ್ವಾಸ ನಮಗೆ ಇದೆ. ನಾನು ಈ ಸಂದರ್ಭದಲ್ಲಿ ನಿವೇದಿಸಿಕೊಳ್ಳಬೇಕಾಗಿರುವ ಒಂದು ವಿಚಾರ ಎಂದರೆ ಯಾವುದೇ ಸ್ಥಾನಗಳು ಶಾಶ್ವತವಲ್ಲ. ಆದರೆ ವ್ಯಕ್ತಿಯ ನೆನಪು ಬರತಕ್ಕದ್ದು, ವ್ಯಕ್ತಿ ಆ ಸ್ಥಾನದಿಂದ ಬಿಟ್ಟನಂತರ ಎಷ್ಟರ ಮಟ್ಟಿಗೆ ಜನರು ನೆನೆಸಿಕೊಳ್ಳುತ್ತಾರೆ ಅದು ಗಮನಾರ್ಹ. ತಾವು ಈ ಸದನದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಬಲ್ಲಿರೆಂದು ನಾನು ಆಗಲೇ ವ್ಯಕ್ತಪಡಿಸಿದ್ದೇನೆ. ಇನ್ನು ಈ ಸದನದ ಹೊರಗೆ ಮಾಡಬೇಕಾದ ಕೆಲಸ ತಮ್ಮಿಂದ ಆಗಬೇಕಾಗಿದೆ. ನಮ್ಮ ವಿಧಾನ ಸಭೆಯ ಕಾರ್ಯಕ್ರಮಗಳು ಯಶಸ್ವಿಯಾಗಿ, ಚಿರಸ್ಮರಣೀಯವಾಗಿ ಆಗಬೇಕು. ಇಲ್ಲಿರುವ ಕೆಲಸಕಾರ್ಯಗಳು ಯಶಸ್ವಿಯಾಗಬೇಕಾದರೆ ಹೊರಗೆ ಇರತಕ್ಕ ಲೆಜಿಸ್ಲೇಚರ್ ಏನಿದೆ ಅದು ಸ್ವತಂತ್ರವಾಗಿರಬೇಕು. ಅದರ ಜೊತೆಗೆ ಸುವ್ಯವಸ್ಥಿತ ಗ್ರಂಥ ಭಂಡಾರ ಅಗತ್ಯವಾಗಿ ಇರಬೇಕು

ಇವೊತ್ತು ನಮಗೆ ಗ್ರಂಥ ಭಂಡಾರದಲ್ಲಿ ಅಗತ್ಯ ಪುಸ್ತಕಗಳು ಸಿಕ್ಕುವುದು ಕಷ್ಟವಾಗಿದೆ. ನಮಗೆ ಹಣವನ್ನು ಸರ್ಕಾರ ಎಷ್ಟೋ ಉದಾರತೆಯಿಂದ ಕೊಡುತ್ತಾರೆ, ಆ ಹಣವನ್ನು ಉಪಯೋಗಿಸಿಕೊಂಡು ಗ್ರಂಥಗಳ ಸಂಗ್ರಹಣೆ ಕಾರ್ಯ ನಡೆದಿಲ್ಲ. ಸುವ್ಯವಸ್ಥಿತವಾದಂಥ ಗ್ರಂಥಾಲಯ ನಿರ್ಮಾಣವಾಗಿಲ್ಲ. ಅದು ಅತ್ಯಂತ ಜರೂರಾಗಿ ಆಗಬೇಕಾದ ಕೆಲಸ. ಈಗ ಒಂದು ನೂರು ವರ್ಷಗಳ ಶತಮಾನೋತ್ಸವವನ್ನು ನಡೆಸಬೇಕೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಕಡೆ ಗಮನ ಕೊಡಬೇಕು. ಶಾಸನ ಸಭೆಗೆ ನೂರು ವರ್ಷಗಳು ತುಂಬುತ್ತದೆ, ಶತಮಾನೋತ್ಸವ ನಡೆಸುವ ಕಾಲ ಬಂದಿದೆ ಎಂದು ನಾನು ಭಾವಿಸಿದ್ದೇನೆ. ಈ ಸಂದರ್ಭದಲ್ಲಿ ನಾವು ಗ್ರಂಥ ಭಂಡಾರಗಳಿಗೆ ಹೋದರೆ ಇಡೀ ಪುಸ್ತಕಗಳನ್ನೇ ಹೊತ್ತು ತರಬೇಕಾಗಿದೆ. ಆಧುನಿಕ ವಿಜ್ಞಾನ ಮುಂದುವರಿದ ಕಾಲದಲ್ಲೂ ಇನ್ನೂ ಹಳೆಯ ಗ್ರಂಥಗಳನ್ನು ಹೊತ್ತು ತಂದು ಈ ಸದನದ ಮುಂದಿಡತಕ್ಕ ಪರಿಸ್ಥಿತಿ ಇದೆ. ನಮ್ಮ ಸರ್ಕಾರದ ಸಲಹೆ ಮತ್ತು ಸಹಕಾರವನ್ನು ಪಡೆದು ಶೀಘ್ರ ಮುದ್ರಣ ಆಗತಕ್ಕಂಥ, (ಝೆರಾಕ್ಸ್ ಮುದ್ರಣದ ರೀತಿ) ವ್ಯವಸ್ಥೆಯಾಗಬೇಕು. ಯಾವುದೇ ಸದಸ್ಯರು ಅಪೇಕ್ಷೆ ಮಾಡತಕ್ಕ ಗ್ರಂಥದ ಪುಟಗಳು ಕಡಿಮೆ ದರದಲ್ಲಿ ಸಿಕ್ಕುವಂತೆ ತಮ್ಮ ಅಧಿಕಾರದ ಅವಧಿಯಲ್ಲಿ ಮಾಡಿದರೆ ಚಿರಸ್ಥಾಯಿ ಕೆಲಸ ಮಾಡಿದಂತಾಗುತ್ತದೆಂದು ಹೇಳಿ, ಈ ಶುಭ ದಿವಸ ತಾವು ಅಧ್ಯಕ್ಷರಾಗಿದ್ದೀರಿ. ತಾವು ಈ ಸದನದ ಸೇವೆ ಮಾಡುವುದರ ಮೂಲಕ ಎಲ್ಲ ಸದಸ್ಯರಲ್ಲೂ ನವಚೇತನವನ್ನು ಮೂಡಿಸಲು, ಈ ಸದನದ ಎಲ್ಲ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸುವಂತಹ ಶಕ್ತಿಯನ್ನು ಭಗವಂತನು ತಮಗೆ ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೨-೩೦ ಪಿ. ಎಂ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಸನ್ಮಾನ್ಯ ಅಧ್ಯಕ್ಷರೆ, ತಾವು ಈ ಮಹಾ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಆರಿಸಿಬಂದು ಆ ಸ್ಥಾನವನ್ನು ಅಲಂಕರಿಸಿರುವುದನ್ನು ನೋಡಿ ನನಗೆ ಅತ್ಯಂತ ಹೆಮ್ಮೆ ಎನಿಸುತ್ತಿದೆ. ನಾನು ತಮ್ಮ ಬಗ್ಗೆ ಏನೇನೋ ಹೇಳಬೇಕೆಂದಿದ್ದೆ. ಆದರೆ ನನಗಿಂತಲೂ ಮುಂಚಿತವಾಗಿ ನನ್ನ ಮಿತ್ರ ಸದಸ್ಯರು ತಮ್ಮ ವ್ಯಕ್ತಿತ್ವವನ್ನು ಈ ಮಹಾ ಸಭೆಯ ಗಮನಕ್ಕೆ ತಂದಿದ್ದಾರೆ. ನಾನು ತಮ್ಮನ್ನು ೧೯೬೨ ರಿಂದಲೂ ಬಲ್ಲೆ. ಅಂದರೆ ಸುಮಾರು ೧೮ ವರ್ಷಗಳ ಪರಿಚಯ ನನಗಿದೆ. ಮಾನ್ಯ ಭಾಸ್ಕರ ಶೆಟ್ಟಿಯವರು ಮಾತನಾಡುವಾಗ ಅವರು ತಮ್ಮನ್ನು ತುಂಬಾ ಹತ್ತಿರದಿಂದ ಕಂಡು ಮಾತನಾಡಿದ್ದರೂ ಇನತ್ತಿನ ದಿವಸ ತಮ್ಮ ಬಗ್ಗೆ ಮಾತನಾಡಲು ಮಾತೇ ಬರುತ್ತಿಲ್ಲವೆಂದು ಹೇಳಿದರು. ಆದರೆ ನಾನು ತಮ್ಮನ್ನು ದೂರದಿಂದ ಕಂಡು ಮಾತನಾಡುತ್ತಿರುವಂಥ ವ್ಯಕ್ತಿ ಎಂದು ಹೇಳಬೇಕಾಗಿದೆ. ನಾನು ತಮ್ಮ ಬಗ್ಗೆ ಬಹಳಷ್ಟು ಹೇಳದೆ, ಹೊಗಳಿ, ಹೊಗಳಿ ಹೊನ್ನ ಶೂಲಕ್ಕೇರಿಸಿದರು, ಎನ್ನುವಂತೆ ನಿಮ್ಮನ್ನು ಹೆಚ್ಚು ಹೊಗಳದೆ ನಿಮ್ಮ ಬಗ್ಗೆ ಬಹಳ ಹೆಮ್ಮೆಯನ್ನು ಇಟ್ಟುಕೊಂಡಿದ್ದೇನೆಂದು ಮಾತ್ರ ಹೇಳಬಯಸುತ್ತೇನೆ ತಾವು ಬಹಳ ಅನುಭವವನ್ನು ಹೊಂದಿರತಕ್ಕವರು. ನಾವು ಈಗ ಹೊಸ ಅನುಭವವನ್ನು ಪಡೆಯಬೇಕಾಗಿರುವುದರಿಂದ ತಾವು ನಮಗೆ ಮಾರ್ಗದರ್ಶನ ನೀಡಬೇಕು. ತಮ್ಮ ಎಡಗಣ್ಣು ಯಾವಾಗಲೂ ನಮ್ಮ ಮೇಲೆಯೇ ಇರಲೆಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ರಾಮು (ಚನ್ನಪಟ್ಣ).—ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಈ ದಿನ ಈ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿರತಕ್ಕದ್ದು ನನಗಾದರೂ ಅತೀವ ಸಂತೋಷವನ್ನುಂಟುಮಾಡಿದೆ. ಏಕೆಂದರೆ, ೧೯೫೫ ರಿಂದಲೂ ನಾನು ನಿಮ್ಮನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ನಿಮ್ಮ ಜೊತೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದಲ್ಲಿ ಇದ್ದುಕೊಂಡು ಕೆಲಸಮಾಡಿದ್ದೇನೆ. ತಾವು ಸಮಾಜವಾದಿಗಳಾಗಿ, ಕಾಂಗ್ರೆಸ್ ಅಧ್ಯಕ್ಷರಾಗಿ, ಸಂಸದೀಯ ವ್ಯವಹಾರಗಳ ಸಚಿವರಾಗಿ ಇಷ್ಟೇ ಅಲ್ಲದೆ ವಿರೋಧ ಪಕ್ಷದಲ್ಲಿ ಇದ್ದುಕೊಂಡು ಅಪಾರವಾದ ಅನುಭವವನ್ನು ಗಳಿಸಿದ್ದೀರಿ. ಒಬ್ಬ ಅಧ್ಯಕ್ಷರಿಗೆ ಮುಖ್ಯವಾಗಿ ಇರಬೇಕಾದ ತಾಳ್ಮೆ ಮತ್ತು ಜಾಣ್ಮೆ ಎರಡೂ ತಮ್ಮಲ್ಲಿದೆ. ಲೋಕಸಭೆಯಲ್ಲಿ ಮಾವಲಂಕರ್‌ರವರ ಹೆಸರು ಮತ್ತು ನಮ್ಮ ರಾಜ್ಯದ ವಿಧಾನ ಸಭೆಯಲ್ಲಿ ದಿ; ವೈಕುಂಠ ಬಾಳಿಗಾರವರ ಹೆಸರು ಹೇಗೆ ಚಿರಂತರವಾಗಿದೆಯೋ ಅದೇ ರೀತಿ ಈ ಸಭೆಯ ಕಾರ್ಯಕಲಾಪಗಳು ನಡೆಯುವಾಗ, ರೂಲಿಂಗ್ ಕೊಡುವಾಗ ನೀವು ನಿಷ್ಪಕ್ಷಪಾತವಾಗಿ ನಡೆದುಕೊಂಡು ನಿಮ್ಮ ಹೆಸರೂ ಕೂಡ ಚಿರಂತರವಾಗಿ ಇರುವಂತಾಗಲೆಂದು ನನ್ನ ಆಸೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಗುಂಡೂರಾವ್‌ರವರು ತಮ್ಮನ್ನು ಈ ಸ್ಥಾನಕ್ಕೆ ಆರಿಸಿ

ತಂದಿರುವುದು ನಿಜವಾಗಿಯೂ ಸ್ವಾಗತಾರ್ಹ ವಿಚಾರ. ನಮ್ಮ ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾ ನಿಮ್ಮ ಕಣ್ಣು ಸದಾ ನಮ್ಮ ಮೇಲಿರಲೆಂದು ಹೇಳಿದರು. ಆದರೆ ನಾನಾದರೂ ಹೇಳುವುದಿಷ್ಟು. ತಕ್ಕಡಿ ಒಂದೇ ಸಮಾನಾಗಿ ಇರುವಂತೆ ನೀವೂ ಕೂಡ ನಿಷ್ಪಕ್ಷಪಾತವಾಗಿ ನಡೆದುಕೊಳ್ಳ ಬೇಕೆಂದು ಆಶಿಸುತ್ತೇನೆ.

ಸ್ವಾಮಿ, ತಮಗೆ ಆ ಭಗವಂತನು ಎಲ್ಲ ರೀತಿಯಿಂದಲೂ ಒಳ್ಳೆಯದನ್ನು ಮಾಡಲಿ, ಮತ್ತು ಈ ಸಭೆಯ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಸರ್ವ ಶಕ್ತಿಯನ್ನೂ ಕೊಡ ಲೆಂದು ಹೇಳಿ ಈ ಸಂದರ್ಭದಲ್ಲಿ ತಮ್ಮನ್ನು ಅಭಿನಂದಿಸುತ್ತೇನೆ.

† ಶ್ರೀ ಜಿ. ಬಸವಣ್ಣಪ್ಪ (ಹೊಳೆಹೊನ್ನೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಈ ಸಭೆಗೆ ತಾವು ಅವಿರೋಧವಾಗಿ ಆಯ್ಕೆಯಾದುದಕ್ಕೆ ನನ್ನ ಮನಸ್ಸು ತುಂಬಾ ಸಂತೋಷಗೊಂಡಿದೆ. ತಮ್ಮ ಈ ಅವಿರೋಧ ಆಯ್ಕೆಗೆ ಸಹಕರಿಸಿದ ಮಾನ್ಯ ಮುಖ್ಯ ಮಂತ್ರಿಯವರಿಗೂ ಹಾಗೂ ಮಾನ್ಯ ವಿರೋಧ ಪಕ್ಷದವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ತಾವು ಈ ಸಭೆಯಲ್ಲಿ ಮಂತ್ರಿಯಾಗಿದ್ದು ಕೊಂಡು ಸುಮಾರು ಎರಡು ದಶಕಗಳಕಾಲ ಅನುಭವವನ್ನು ಹೊಂದಿದ್ದೀರಿ. ಇದರಿಂದಾಗಿ ಈ ಸಭೆಯ ನಡವಳಿಕೆಗಳನ್ನು ದಕ್ಷತೆಯಿಂದ ಮತ್ತು ಜಾಣಾಕ್ಷತೆಯಿಂದ ನಡೆಸಿಕೊಂಡು ಹೋಗುತ್ತೀರೆಂದು ಹೇಳ ಬಯಸುತ್ತೇನೆ. ತಾವು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದಾಗ ಹಿಂದೆ ಅನೇಕ ಸಂದರ್ಭಗಳಲ್ಲಿ ಈ ಸಭೆ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿದ್ದಾಗ ಬಹಳ ಸುಲಭವಾಗಿ ಆ ತೊಡಕಿನಿಂದ ಬಿಡಿಸಿದ್ದೀರಿ. ಇಷ್ಟೇ ಅಲ್ಲದೆ ಆಡಳಿತ ಪಕ್ಷದ ಸದಸ್ಯರಾಗಿ, ಸಚಿವರಾಗಿ, ವಕೀಲರಾಗಿ, ಎಲ್ಲ ಕ್ಷೇತ್ರದಲ್ಲೂ ಅನುಭವವನ್ನು ಹೊಂದಿರುವುದರ ಜೊತೆಗೆ ಈ ಸದನದ ಎರಡೂ ಕಡೆಯ ಸದಸ್ಯರ ಮನಸ್ಸಿನ ಇಂಗಿತವನ್ನು ಅರಿತು ನಡೆದುಕೊಳ್ಳಬಲ್ಲ ಶಕ್ತಿ ನಿಮಗಿದೆ.

ಇಷ್ಟು ಹೇಳಿ, ನಿಮಗೆ ಆ ಭಗವಂತನು ಆಯುರಾರೋಗ್ಯಗಳನ್ನು ಕರುಣಿಸಿ ಈ ಸದನದ ಕಾರ್ಯ ಕಲಾಪಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಸರ್ವ ಶಕ್ತಿಯನ್ನೂ ಕೊಡಲೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎನ್. ಕೆಂಗೇಗೌಡ (ಚಾಮರಾಜ).—ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಈ ದಿವಸ ಈ ಸಭೆಗೆ ಒಮ್ಮತದಿಂದ ಆಯ್ಕೆಯಾಗಿ ಉನ್ನತಸ್ಥಾನಕ್ಕೆ ಆರಿಸಿಬಂದಿರುವುದನ್ನು ನಾವು ಮನಗಂಡಿದ್ದೇವೆ. ನಿಮ್ಮ ಆಯ್ಕೆಗೆ ಕಾರಣರಾದ ಮಾನ್ಯ ಮುಖ್ಯ ಮಂತ್ರಿಯವರನ್ನೂ ವಿರೋಧ ಪಕ್ಷದ ನಾಯಕರನ್ನೂ ಈ ಸಂದರ್ಭದಲ್ಲಿ ನಾನು ಅಭಿನಂದಿಸಬೇಕಾಗಿದೆ. ಏಕೆಂದರೆ, ತಮ್ಮ ಒಮ್ಮತದ ಆಯ್ಕೆಯಲ್ಲಿ ಅವರು ಸಹಕರಿಸಿದ್ದಾರೆ. ಒಂದು ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ, ಮಾನ್ಯ ಸದಸ್ಯರಾದ ಅರ್ಸ್ಗಂರವರು ಮಾತನಾಡುತ್ತಾ ಏನಾದರೂ ಪಾಯಿಂಟ್ ಆಫ್ ಆರ್ಡರ್ ಈ ಸದನದಲ್ಲಿ ರೈಸ್ ಆದಾಗ ತಾವು ತಕ್ಷಣ "No there is no point of order" ಎಂದು ಹೇಳುವುದಕ್ಕೆ ಹೋಗದೆ, ಜುಡಿಷಿಯಸ್ ಆಗಿ ಜಡ್ಜ್‌ಮೆಂಟ್ ಕೊಡಬೇಕೆಂಬುದು ನನ್ನ ಇಚ್ಛೆ. ಕೆಲವಾದಲ್ಲಿ ಸದಸ್ಯರನ್ನು ಹೊರಗಡೆ ಕಳುಹಿಸಬೇಕಾದರೆ ಏನು ಸಂಪ್ರದಾಯವನ್ನು ಅನುಸರಿಸುತ್ತಾರೆ ಅದು ಸರಿಯಲ್ಲ. ಒಟ್ಟಿನಲ್ಲಿ ಅದು ಏನೇ ಇರಲಿ, ತಾವು ಈ ಸದನದಲ್ಲಿ ಏನು ಮಾಡಬೇಕು. ಹೇಗೆ ಮಾಡಬೇಕೆಂಬ ವಿಚಾರ ತಮಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ತಾವು ವಿರೋಧ ಪಕ್ಷದಲ್ಲಿ ಸೇವೆ ಸಲ್ಲಿಸಿದ್ದೀರಿ. ಆಡಳಿತ ಪಕ್ಷದಲ್ಲಿ ಸೇವೆ ಸಲ್ಲಿಸಿದ್ದೀರಿ, ಸಂಸದೀಯ ವ್ಯವಹಾರಗಳ ಸಚಿವರಾಗಿ ಸೇವೆ ಸಲ್ಲಿಸಿದ್ದೀರಿ. ಇದರಿಂದಾಗಿ ಈ ಸ್ಥಾನ ದಲ್ಲಿ ಕುಳಿತು ತಾವು ನಿಷ್ಪಕ್ಷಪಾತತೆಯಿಂದ ಎಲ್ಲರೂ ಮೆಚ್ಚುವ ರೀತಿಯಲ್ಲಿ ಸೇವೆ ಸಲ್ಲಿಸಲು ಅವಕಾಶವಿದೆ ಯೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಆ ದೇವರ ಸಹಾಯ ಇರಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎ. ಮತ್ತಿಕಟ್ಟಿ (ರೋಣ).—ಸನ್ಮಾನ್ಯ ಅಧ್ಯಕ್ಷರೇ, ನನಗೆ ಇಂದು ಬಹಳ ಸಂತೋಷವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು, ಈ ಸದನದ ಸದಸ್ಯರು, ಸಮಾಜದ ಸಾಮಾನ್ಯ ಜನತೆಯ ಬಗ್ಗೆ ಬಹಳ ಕಳಕಳಿ ಯಿರತಕ್ಕಂಥ ಚಿಂತನೆ ಯಿರತಕ್ಕಂಥ ಒಬ್ಬ ಮಹಾನ್ ವ್ಯಕ್ತಿ ಯನ್ನು ಈ ಸದನದ ಅಧ್ಯಕ್ಷರನ್ನಾಗಿ ಚುನಾಯಿಸಿರುವುದು ನನಗೆ ಅತ್ಯಂತ ಸಂತೋಷದ ಸಂಗತಿ ಯಾಗಿದೆ. ತಾವು ಈ ರಾಜ್ಯದ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಹಾಗೂ ಮಂತ್ರಿಗಳಾಗಿದ್ದಾಗ್ಯೂ ಬಹಳಷ್ಟು

ಯುವಜನ ಪ್ರತಿನಿಧಿಗಳಿಗೆ ಸಮಾಜವಾದದಲ್ಲಿ ವಿಶ್ವಾಸ ಇಟ್ಟು ನಡೆದುಕೊಳ್ಳುವ ಒಂದು ಮಾರ್ಗದರ್ಶನವನ್ನು ಮಾಡಿದ್ದೀರಿ. ತಾವು ಮಂತ್ರಿಗಳಾಗಿದ್ದಾಗ ಹೊಸದಾಗಿ ಶಾಸನಸಭೆಗೆ ಬಂದವರಿಗೆ ಸದನದ ಕಾರ್ಯಕಲಾಪಗಳ ಬಗ್ಗೆ ಮತ್ತು ಅತ್ಯಂತ ಪ್ರಭಾವಯುತವಾಗಿ ಕೆಲಸಮಾಡುವುದರ ಬಗ್ಗೆ ತಿಳುವಳಿಕೆಯನ್ನು ಕೊಡಬೇಕು ಎನ್ನುವ ದಿಸೆಯಲ್ಲಿ ಹಂತಹಂತವಾಗಿ ಶಾಸಕರಿಗೆ ಒಂದು ಮಾರ್ಗದರ್ಶನ ಮಾಡಬೇಕು ಎನ್ನುವ ವಿಚಾರವನ್ನು ಹಲವಾರು ಸಲ ವ್ಯಕ್ತಪಡಿಸಿದ್ದೀರಿ. ಇಂದು ಸುದೈವದಿಂದ ಈ ಸದನದ ಅಧ್ಯಕ್ಷಸ್ಥಾನದಲ್ಲಿ ತಾವು ಇದ್ದೀರಿ. ತಾವು ಈ ಸದನದ ಬಹಳಷ್ಟು ಜನ ಸದಸ್ಯರಿಗೆ ಕಾರ್ಯಕಲಾಪಗಳ ಬಗ್ಗೆ ಮುಂದೆ ಒಂದು ಸುವ್ಯವಸ್ಥಿತವಾದ ಮಾರ್ಗದರ್ಶನ ನೀಡುತ್ತೀರಿ ಎನ್ನುವ ನಂಬಿಕೆಯನ್ನು ಇಟ್ಟುಕೊಂಡು ತಮ್ಮಲ್ಲಿರತಕ್ಕಂಥ ಸಾಮರ್ಥ್ಯದ ಬಗ್ಗೆ ಇಡೀ ರಾಜ್ಯದ ರಾಜಕಾರಣದಲ್ಲಿರತಕ್ಕಂಥವರು ಅರಿತುಕೊಂಡಿದ್ದಾರೆ. ತಮ್ಮ ಅಧ್ಯಕ್ಷತೆಯಲ್ಲಿ ಈ ಸದನದ ಗೌರವ ಇನ್ನೂ ಹೆಚ್ಚಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಮತ್ತೊಮ್ಮೆ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ (ಬೀಳಗಿ).—ಸನ್ಮಾನ್ಯ ಅಧ್ಯಕ್ಷರೇ ತಮ್ಮ ವರ್ತನೆಯನ್ನು ಕಂಡರೆ ನನಗೆ ಬಹಳಷ್ಟು ಅಭಿಮಾನ. ನನ್ನಷ್ಟಕ್ಕೆ ಮಾತ್ರವಲ್ಲ, ನಾಡಿನಾದ್ಯಂತ ಇರತಕ್ಕಂಥ ಎಲ್ಲ ಅಭಿಮಾನಿಗಳಿಗೂ ತಾವು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದು ಬಹಳ ಸಂತೋಷದಾಯಕವಾಗಿರುತ್ತದೆ. ತಾವು ವಕೀಲರಾಗಿ ೨೦ ವರ್ಷಗಳಕಾಲ ಕರ್ನಾಟಕರಾಜ್ಯದಲ್ಲಿ ಸೇವೆಯನ್ನು ಸಲ್ಲಿಸಿದ್ದೀರಿ. ಕೆ. ಎಚ್. ರಂಗನಾಥ್ ಎಂದರೆ ಸಮಾಜವಾದದ ರಂಗನಾಥ್ ಎಂದು ಕರ್ನಾಟಕದಲ್ಲಿ ಪ್ರಸಿದ್ಧಿಯಾಗಿದ್ದೀರಿ ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಡಾ|| ರಾಮ್‌ಮೋಹನ್ ಲೋಹಿಯಾರವರ ವಿಚಾರಧಾರೆಯನ್ನು ತಮ್ಮ ವಿಚಾರಧಾರೆಯಲ್ಲಿ ಅಳವಡಿಸಿಕೊಂಡು ಅವಿರತವಾಗಿ ಕರ್ನಾಟಕ ರಾಜ್ಯದಲ್ಲಿ ೨೫ ವರ್ಷಗಳಿಂದಲೂ ದುಡಿದಿದ್ದೀರಿ. ತಮ್ಮ ದಕ್ಷತೆ, ತಾಳ್ಮೆಯ ಮನೋಭಾವನೆ ನಮ್ಮ ಎಲ್ಲ ಗೆಳೆಯರ ಗುಂಪಿಗೆ ಚಿರಪರಿಚಯವಿರುತ್ತದೆ. ಈ ಸಂದರ್ಭದಲ್ಲಿ ವಿಧಾನಸಭೆಯ ಅಧ್ಯಕ್ಷರಾದುದು ನಮಗೆ ಮತ್ತಷ್ಟು ಸಂತೋಷದ ಸಂಗತಿಯಾಗಿರುತ್ತದೆ. ತಾವು ಬಹಳ ಆಳವಾಗಿ ಅಭ್ಯಾಸ ಮಾಡಿದಂಥ ವ್ಯಕ್ತಿಗಳು. ಭಾರತದ ಜನತೆಗೆ ಇಂಥದೇ ಸಮಾಜವಾದ ಬೇಕು ಎನ್ನುವ ನಿಷ್ಠೆಯನ್ನು ಇಟ್ಟುಕೊಂಡು ಜೀವನದಲ್ಲಿ ಅದನ್ನು ರೂಢಿಸಿಕೊಂಡು ಜನತೆಗೆ ಮಾರ್ಗದರ್ಶನ ಮಾಡುವಂತ ಪಾಠವನ್ನು ತಾವು ತೋರಿದ್ದೀರಿ. ೧೯೭೨ ರಿಂದ ೧೯೮೦ ರ ವರೆಗೆ ತಾವು ಈ ಸದನದಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಎಂಥ ಸಂದಿಗ್ಧ ಪರಿಸ್ಥಿತಿಬಂದಾಗ್ಯೂ ಕೂಡ ಮಾನ್ಯ ಶಿವಪ್ಪನವರು, ದಿವಂಗತ ಮಾನ್ಯ ಗೋಪಾಲಗೌಡರೊಡನೆ ಪ್ರತಿಯೊಂದು ವಿಷಯವನ್ನು ಚರ್ಚಿಸಿ ಅವರಿಂದ ಉಪದೇಶವನ್ನು ಪಡೆದುಕೊಂಡು ಮುಂದೆ ಸಾಗುತ್ತಿದ್ದಂಥವರು ತಾವು ಈಗಲೂ ತಾವು ಪಡೆದಂಥ ಅನುಭವದಿಂದ ನಿಜವಾಗಿಯೂ ತಮ್ಮಿಂದ ಒಳ್ಳೆಯ ಮಾರ್ಗದರ್ಶನ ಸಿಗುತ್ತದೆಂದು ನಾವು ನಂಬಿದ್ದೇವೆ. ತಮ್ಮನ್ನು ಈ ಒಂದು ಅಧ್ಯಕ್ಷಸ್ಥಾನಕ್ಕೆ ಬರಲು ಅವಕಾಶವನ್ನು ಮಾಡಿಕೊಟ್ಟಂಥ ಮಾನ್ಯ ಮುಖ್ಯ ಮಂತ್ರಿಗಳವರಿಗೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಮಾನ್ಯ ಶ್ರೀ ಡಿ. ದೇವರಾಜಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಶ್ರೀಮಾನ್ ವೆಂಕಟರಮಣರವರನ್ನು ಪ್ರಪ್ರಥಮವಾಗಿ ಅಧ್ಯಕ್ಷಸ್ಥಾನಕ್ಕೆ ಆರಿಸಿ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಕರ್ನಾಟಕದ ಜನತೆ ಬಹಳ ಸಂತೋಷ ಪಟ್ಟರು. ಮುಂದೆ ಶ್ರೀ ವೆಂಕಟರಮಣರವರು ಕರ್ನಾಟಕ ರಾಜ್ಯದ ಮಂತ್ರಿಮಂಡಲವನ್ನು ಸೇರಿದಾಗ ಮತ್ತೆ ಹರಿಜನರೊಬ್ಬರು ಅಧ್ಯಕ್ಷರಾಗಿ ಬರುತ್ತಾರೋ ಇಲ್ಲವೋ ಎನ್ನುವ ಊಹಾಪೋಹಕ್ಕೆ ಎಡೆಮಾಡಿಕೊಟ್ಟಿತ್ತು. ಯಾರು ಬರುತ್ತಾರೋ ಎನ್ನುವ ಸಮಸ್ಯೆಯಾಗಿತ್ತು. ಈವತ್ತಿನದಿವಸ ಅದು ದೂರವಾಯಿತು. ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಚಾಣಾಕ್ಷತನದಿಂದ ಇನ್ನು ಉಳಿದಿರತಕ್ಕಂಥ ಎರಡೂವರೆವರ್ಷಗಳ ಕಾಲಕ್ಕೆ ಒಬ್ಬ ಹರಿಜನ ವ್ಯಕ್ತಿಯನ್ನೇ ಅಧ್ಯಕ್ಷಸ್ಥಾನಕ್ಕೆ ತಂದುದು ನಿಜವಾಗಿಯೂ ಅವರ ಚಾಣಾಕ್ಷತನಕ್ಕೆ ನಾವು ಅಭಿನಂದಿಸಬೇಕಾಗಿದೆ. ಮುಂದೆ ತಾವು ಈ ಮನೆಯ ಘನತೆ ಗೌರವವನ್ನು ಎತ್ತಿಹಿಡಿದು ಎಲ್ಲ ಸದಸ್ಯರಿಗೂ ಮಾರ್ಗದರ್ಶನ ಮಾಡಲು ಭಗವಾನ್ ಬುದ್ಧನು ತಮಗೆ ಬೇಕಾದಂಥ ಸರ್ವಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI A. LAKSHMISAGAR (Chickpet).—Sir, I wish to join the Hon'ble Members in congratulating you and wishing you well in your office. Sir, I cannot but recall the situation that existed just before your

election. The office of the Speaker fell vacant some months ago on Sri Venkataramana joining the Cabinet. In the absence of the Speaker under the Rules of Procedure the Deputy Speaker was discharging the functions of Speaker. Unfortunately it so happened that the Deputy Speaker was very seriously ill. She could not stay in Bangalore. Sometimes she stayed in Hubli and sometimes even outside. It was difficult in the nature of things to carry on with the functions of the Deputy Speaker. She was so gravely ill that she could not administer oath to the members who are elected to the Assembly recently and the unfortunate thing happened, that she passed away. So, this is the first time according to my information that the offices of the Speaker and the Deputy Speaker both fell vacant and I am really astonished as to how the Government slept over this matter, did not take steps to convene a short session of the Assembly for the election of the Speaker as soon as the previous incumbent in the office was inducted into the Council of Ministers. In a situation like this in order to comply with the provisions of the Constitution the Protem Speaker was appointed by the Governor to conduct the business of this House yesterday and today. Sir, this was unavoidable situation and the Government failed to act in time I want you to kindly look into this aspect of the matter.

Then Sir when an hon'ble Member of this House is unanimously elected to the High office of Speaker, 225 Members of this House elect him to the office of the Speaker. The Speaker of the House enjoys higher status than the status of a Member of the Council of Ministers. Therefore, any Member who happens to be in the office of the Speaker must consider himself as a person holding higher office than the office of the Cabinet Minister. But unfortunately there are persons who think otherwise. There has been devaluation of values in our country and this House is no exception to it.

Sir, the office of the Speaker, according to May, is characterised by authority and impartiality. Last night I was reading the passage in the chapter devoted to this purpose. Authority and impartiality are two important aspects. If you are impartial you can maintain authority. But, mere maintenance of authority is not possible without being impartial. Therefore, the office of the Speaker is a very difficult office, often it is nerve racking experience. I have had discussions with some past Speakers of various other States. They told me, sleepless nights they had to pass, before they came to a decision on any burning issue. I want you to remember that you were once a member of the opposition, and now as Speaker of the House, I want you to very much remember that you were a member of this House for 10 long years on this side of the House and the role

you the same may kindly be borne in mind, so far as we are concerned. This is only one point that I should like to bring to your notice.

Sir, 'Impartiality' is a very difficult concept and more difficult to follow in action. It all depends upon the circumstances; it all depends upon the matters that come up for discussion before this House. Sir, you have been a Lawyer, a Legislator and a Minister. All these three characteristic features are rolled into one person and this, I hope and trust, will help you in discharging the onerous duties that are now cast upon you as the Speaker of the House. I have no doubt that you would be able to do so.

Sir, you must not only be impartial, but seen to be impartial. I do not wish to dilate upon this second aspect of the matter but I will certainly have an occasions to bring this aspect to your notice, as and when it arises. You are the guardian of the rights and privileges of the Members of this House. Every member of this House expects you to be above board, give no room for suspicion, give no room for any doubt about your impartiality. If you hold these scales of justice even, nobody will find fault with you. Sir, personally speaking, I would extend my responsive co-operation to you and wish you all success in your new office. Thank you very much.

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಮಾನ್ಯ ಅಧ್ಯಕ್ಷರೆ, ತಮ್ಮನ್ನು ಈ ಒಂದು ಉನ್ನತ ಸ್ಥಾನಕ್ಕೆ ನೇಮಕ ಮಾಡಿದ ತಕ್ಷಣವೇ ನಿಷ್ಟೆ ಮತ್ತು ಪ್ರಾಮಾಣಿಕತೆಗೆ ಮಾನ್ಯ ಮುಖ್ಯ ಮಂತ್ರಿಗಳು ಆದ್ಯತೆ ಕೊಟ್ಟಿದ್ದಾರೆನ್ನುವುದು ಒಂದು ನಿದರ್ಶನವಾಗಿದೆ. ಅದರಿಂದ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಒಂದು ಚುನಾವಣೆಯಲ್ಲಿ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ವಿರೋಧ ಪಕ್ಷದ ಸದಸ್ಯರಿಗೂ ನನ್ನ ಅಭಿನಂದನೆಗಳನ್ನು ವ್ಯಕ್ತಪಡಿಸುತ್ತೇನೆ. ತಮ್ಮ ಬಗ್ಗೆ ಅನೇಕ ಸ್ನೇಹಿತರು ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಅವರು ಆತ್ಮೀಯತೆಯಿಂದ ಆಡಿದ ಮಾತುಗಳು ಅವು. ತಾವು ಸಾಮಾನ್ಯವಾಗಿ ಅನೇಕ ಸಾರಿ ನೋಡಿದ್ದೀರಿ ಯಾರೇ ಒಬ್ಬ ವ್ಯಕ್ತಿ ಉತ್ತಮ ಸ್ಥಾನಕ್ಕೆ ಬಂದರೆ ಅವರ ಬಗ್ಗೆ ಪ್ರಶಂಸೆ ಮಾಡುವುದು ವಾಡಿಕೆ. ಕೈಗೆ ಭಿನ್ನವತ್ತಳೆಗಳನ್ನು ಕೊಡುತ್ತಾರೆ. ತಾವು ತುರಂಗವಾಸವನ್ನು ಅನುಭವಿಸಿ ಬಂದಿದ್ದೀರೆಂದು ಆಡಿ ಹೊಗಳುತ್ತಾರೆ. ಆದರೆ ಅವರು ಒಂದು ಬಾರಿಯೂ ಜೈಲನ್ನೇ ನೋಡಿರುವುದಿಲ್ಲ. ಆದರೆ ಇಲ್ಲಿ ತಮ್ಮ ಬಗ್ಗೆ ಎಲ್ಲರೂ ಬಹಳ ಪ್ರೀತಿ ವಿಶ್ವಾಸದಿಂದ ಮಾತನಾಡಿದ್ದಾರೆ. ಮತ್ತು ತಮಗೂ ಕೂಡ ಶಾಸನಸಭೆಗಳ ಬಗ್ಗೆ ಬಹಳ ಅಭಿಮಾನ ಇದೆ. ತಾವು ಪಾರ್ಲಿಮೆಂಟರಿ ಮಂತ್ರಿಗಳಾಗಿದ್ದಾಗ ಶಾಸನಸಭಾ ಸದಸ್ಯರ ವೇತನ ಮತ್ತು ನಿವೃತ್ತಿವೇತನದ ಬಗ್ಗೆ ಶ್ರಮವಹಿಸಿ ಅವುಗಳನ್ನು ಸದಸ್ಯರಿಗೆ ಒದಗಿಸಿಕೊಟ್ಟಿದ್ದೀರಿ. ನಮಗೆಲ್ಲರಿಗೂ ನಿಮ್ಮ ಮೇಲೆ ಅಭಿಮಾನವಿದೆ. ಆದರೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಜೆ.ಎಚ್. ಪಟೇಲರು "ಆಡಳಿತ ಪಕ್ಷದವರಿಗೆ ಒಂದು ಔನ್ಸ್, ವಿರೋಧ ಪಕ್ಷದವರಿಗೆ ಒಂದು ಟನ್ ಪ್ರಮಾಣದ ಆದ್ಯತೆಯನ್ನು ಕೊಡಿ" ಎಂದು ಹೇಳಿದರು. ಅಷ್ಟೊಂದು ಆದ್ಯತೆ ಕೊಟ್ಟರೆ ಘರ್ಷಣೆಯಾಗುತ್ತದೆ. ತಾವು ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದ ಇತಿಮಿತಿ ಏನು ಎಂಬುದು ನಿಮಗೂ ಗೊತ್ತಿದೆ. ಎಲ್ಲರಿಗೂ ಸಮಾಧಾನ ತರತಕ್ಕಂತಹ ಒಂದು ರೀತಿಯಲ್ಲಿ ತಾವು ನಡೆದುಕೊಳ್ಳುತ್ತೀರೆಂದು ನಾನು ನಂಬಿರುತ್ತೇನೆ. ಶ್ರೀ ಆರ್.ಎಸ್. ಪಾಟೀಲರು ತಮ್ಮ ಕಡೆ ಎಡಗಣ್ಣನ್ನು ಇಡಿ ಎಂದು ಹೇಳಿದರು. ಆದರೆ ನಾನು ಹೇಳುತ್ತೇನೆ ಮಾನ್ಯ ಅಧ್ಯಕ್ಷರು ತಮ್ಮ ಬಲಗಣ್ಣನ್ನೂ ಸಹಾ ವಿರೋಧ ಪಕ್ಷದವರ ಕಡೆ ಇಡಬೇಕು. ಅವರನ್ನು ವಿರೋಧ

ಪಕ್ಷದವರೆಂದು ಕಡೆಗಾಣಿಸಬಾರದು. ಆ ಒಂದು ಶಕ್ತಿ ಮತ್ತು ಉತ್ಸಾಹ ತಮ್ಮಲ್ಲಿ ಇದೆ. ತಮಗೆ ಗುಬ್ಬಿ ಚನ್ನಬಸವೇಶ್ವರ ಸ್ವಾಮಿ ಶಕ್ತಿ ಕೊಟ್ಟು ಗೌರವವನ್ನು ಎತ್ತಿ ಹಿಡಿಯುತಕ್ಕ ಧೈರ್ಯ, ಸ್ಥೈರ್ಯ ಕೊಡಲಿ ಎಂದು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೆ, ಈ ಒಂದು ಅಧ್ಯಕ್ಷ ಸ್ಥಾನಕ್ಕೆ ತಾವು ಎಷ್ಟರಮಟ್ಟಿಗೆ ಯೋಗ್ಯರು, ವ್ಯಕ್ತಿಶಃ ತಾವು ಎಷ್ಟು ಅನುಭವವನ್ನು ಪಡೆದಿರತಕ್ಕವರು ಎನ್ನುವ ಬಗ್ಗೆ ಮಾನ್ಯ ಮಿತ್ರರು ಹೇಳಿದ್ದಾರೆ. ಅದನ್ನು ನಾನು ಅಕ್ಷರಸಹ ಒಪ್ಪುತ್ತೇನೆ. ತಾವು ಈ ಒಂದು ಸ್ಥಾನ ವನ್ನು ಪಡೆದುಕೊಂಡ ಮೇಲೆ ತಮ್ಮ ಕಾಲದಲ್ಲಿ ಏನೇನು ಕೆಲಸಕಾರ್ಯಗಳು ಆಗಬೇಕು ಎನ್ನುವ ಆಸೆ ಗಳನ್ನು ಇಟ್ಟುಕೊಂಡಿದ್ದಾರೆ ಅವುಗಳನ್ನೆಲ್ಲಾ ಹೇಳಿದ್ದಾರೆ. ಈ ಒಂದು ಸ್ಥಾನದಲ್ಲಿ ಕುಳಿತುಕೊಳ್ಳು ವವರಿಗೆ ಶ್ರೀ ಬಾಳಿಗಾರವರಿಗೆ ಇದ್ದಂತೆ ಚಾಣ್ಮೆ ಇರಬೇಕೆಂದು ಹೇಳುವಾಗ, ಚಾಣ್ಮೆ ಜೊತೆಗೆ ತಾಳ್ಮೆಯೂ ಇರಬೇಕೆಂದು ನಾನು ಹೇಳುತ್ತೇನೆ. ಚಾಣ್ಮೆ ಮತ್ತು ತಾಳ್ಮೆಯಲ್ಲಿ ಸಮತೂಕ ಪಡೆದುಕೊಳ್ಳಬೇಕಾದರೆ ಈ ಒಂದು ಕ್ಷೇತ್ರದಲ್ಲಿ ಅಘಾದವಾದ ಜ್ಞಾನ ಮತ್ತು ವಿವೇಚನೆ ಇರಬೇಕು ಅದನ್ನೂ ಕೂಡ ತಮಗೆ ದೇವರು ಕೊಡಲಿ ಎಂದು ನಾನು ಹಾರೈಸುತ್ತೇನೆ. ತಮ್ಮ ಕಾಲದಲ್ಲಿ ಈ ಕೆಳಗಿನ ಮೂರೂ ಕಾರ್ಯಗಳು ಆಗುವುದಕ್ಕೆ ಅವಕಾಶ ಮಾಡಿಕೊಟ್ಟರೆ ಈ ಸಭೆಯ ಸದಸ್ಯರೆಲ್ಲರೂ ಸಂತೋಷಪಡುತ್ತಾರೆ. ಒಂದನೆಯದು ನಮ್ಮ ಮನಸ್ಸಿನಲ್ಲಿ ಇರುವ ರೀತಿಯಲ್ಲಿ,

(1) Re-organisation of the Secretariat or the Department of the Legislature;

(2) Family quarters to the Members; and

(3) Lot of opportunities to discuss the Reports of the Commissioner for SCs/STs, as it is done in the Parliament and more so, the reports of the Committees appointed by the Government from time to time, in regard to the welfare of the amelioration work of SCs/STs.

ನನ್ನ ಮನಸ್ಸಿನಲ್ಲಿ ಈ ಸ್ಥಾನದಲ್ಲಿದ್ದಂತಹವರ ಅಧ್ಯಕ್ಷರುಗಳಲ್ಲಿ ನಾನು ಹೆಚ್ಚಿಗೆ ಹೇಳಬೇಕೆಂದರೆ ಶ್ರೀ ಬಾಳಿಗಾರವರ ಹೆಸರನ್ನು ನಾನು ಇಲ್ಲಿ ಹೆಸರಿಸುತ್ತೇನೆ. ಶ್ರೀಮತಿ ನಾಗರತ್ನಮ್ಮನವರು ಆಡಳಿತ ಪಕ್ಷಕ್ಕೆ ಓಪನ್ ಸಪೋರ್ಟ್ ಮಾಡುತ್ತಿದ್ದರು. ಇಂತಹದ್ದು ನಮ್ಮ ಸಭೆಯಲ್ಲಿ ತಮ್ಮ ಕಾಲದಲ್ಲಿ ಆಗದಂತೆ ಕ್ರಿಯಾಲೋಪಗಳನ್ನು ಚಮತ್ಕಾರದಿಂದ ತೆಗೆದುಹಾಕಿ ಸೈ ಎನಿಸಿಕೊಳ್ಳಬೇಕೆಂದು ಹೇಳಿ ಈ ಬಗ್ಗೆ ಭಗವಂತನು ಶಕ್ತಿ ಕೊಡಲಿ ಎಂದು ಹೇಳಿ ಈ ಒಂದು ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ (ಹೊಳೇನರಸೀಪುರ).—ಅಧ್ಯಕ್ಷರೆ, ತಾವು ಈ ದಿವಸ ಈ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿದ್ದಕ್ಕಾಗಿ ನಾನು ತಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಶ್ರೀ ಎಂ.ಎಸ್ ಆತ್ಮಾನಂದ(ಮಂಡ್ಯ).- ಸನ್ಮಾನ್ಯ ಅಧ್ಯಕ್ಷರೆ ತಮ್ಮ ಅಧಿಕಾರಾವಧಿಯಲ್ಲಿ ಈಸದನದ ಗೌರವವನ್ನು ಮತ್ತು ಘನತೆಯನ್ನು ಸುಭದ್ರವಾಗಿ ಎತ್ತಿ ಹಿಡಿಯುತ್ತೀರೆಂದು ನಾನು ತಿಳಿದುಕೊಂಡಿ ದ್ದೇನೆ. ತಾವು ನಮ್ಮನ್ನು ಚೆನ್ನಾಗಿ ಬಲ್ಲವರು. ನಾವೂ ಕೂಡ ತಮ್ಮನ್ನು ಚೆನ್ನಾಗಿ ತಿಳಿದುಕೊಂಡಿ ದ್ದೇವೆ. ತಾವು ಈ ಸದನದ ಕಾರ್ಯಕಲಾಪವನ್ನು ನಡೆಸುವಾಗ ತಮ್ಮ ಗಮನ ವಿರೋಧ ಪಕ್ಷದವರ ಕಡೆಗೂ ಹರಿಸಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಸಮಾಜವಾದದ ಬಗ್ಗೆ ಸತತವಾಗಿ ತಮ್ಮ ಜೊತೆ ಹೋರಾಡಿದವರಲ್ಲಿ ನಾನೂ ಒಬ್ಬ. ಈ ಸಭೆಯಲ್ಲಿ ಕಾರ್ಯಕಲಾಪಗಳು ನಡೆ ಯುವಾಗ ಹಿಂದಿನ ಅಧ್ಯಕ್ಷರಾದ ಶ್ರೀ ವೆಂಕಟರಮಣ ಹಾಗೂ ನನ್ನ ಮಧ್ಯೆ ಸ್ವಲ್ಪ ಬಿಸಿಬಿಸಿ ಚರ್ಚೆಗಳು ಆಗುತ್ತಿದ್ದವು. ಆ ಒಂದು ತಲೆನೋವು ತಪ್ಪಿತು ಎಂದು ನಾನು ಈಗ ಹೇಳುತ್ತೇನೆ. ತಾವು ಸಭಾಧ್ಯಕ್ಷ ಸ್ಥಾನದಲ್ಲಿ ಕುಳಿತು ಎಲ್ಲ ಸದಸ್ಯರಿಗೂ ನ್ಯಾಯವನ್ನು ಒದಗಿಸಿಕೊಡುತ್ತೀರೆಂದು ನಾನು ನಂಬಿರುತ್ತೇನೆ. ಸಭೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದವರಿಗೆ ಸಮಾನ ಅವಕಾಶವನ್ನು ಕೊಡಬೇಕೆಂದು ವಿನಂತಿ ಮಾಡಿಕೊಂಡು ತಮ್ಮನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಿದ ಮುಖ್ಯ ಮಂತ್ರಿಗಳಿಗೆ ಹಾಗೂ ಇದಕ್ಕೆ ಸಹಕರಿಸಿದ ವಿರೋಧ ಪಕ್ಷದವರಿಗೆ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

೩-೦೦ ಪಿ. ಎಂ.

ಅಧ್ಯಕ್ಷರು.— ಸಭಾ ನಾಯಕರೂ ಹಾಗೂ ರಾಜ್ಯದ ಮುಖ್ಯ ಮಂತ್ರಿಗಳಾದಂಥಾ ಶ್ರೀಮಾನ್ ಗುಂಡೂರಾವ್‌ರವರೇ, ವಿರೋಧ ಪಕ್ಷದ ಉಪನಾಯಕರಾದಂಥಾ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರೇ, ವಿವಿಧ ವಿರೋಧ ಪಕ್ಷದ ನಾಯಕರಾದಂಥಾ ಮಿತ್ರರುಗಳೇ ಹಾಗೂ ಈ ಸಭೆಯ ಸದಸ್ಯರಾದ ನನ್ನ ಮಿತ್ರರೇ,

ಈಗಾಗಲೇ ಈ ಬಗ್ಗೆ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದರಿಂದ ನಾನು ಹೆಚ್ಚು ಮಾತನಾಡು ವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಅಧ್ಯಕ್ಷನಾಗಿ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ವಿಚಾರ ಇದೆ ಎಂದು ನಾನು ಭಾವಿಸುತ್ತೇನೆ. ಈವೊತ್ತು ಈ ವಿಚಾರದಲ್ಲಿ ನಾಲ್ಕು ಮಾತುಗಳನ್ನಾಡು ವುದಕ್ಕೆ ಪ್ರಯತ್ನ ಪಡುತ್ತೇನೆ.

ಮೊಟ್ಟಮೊದಲನೆಯದಾಗಿ ಹೇಳಬೇಕಾದರೆ ಈ ಸದನದ ಎಲ್ಲಾ ಸದಸ್ಯರೂ ಸಹ ನನ್ನನ್ನು ಅವಿರೋಧವಾಗಿ ಆರಿಸಿ ಈ ಸ್ಥಾನಕ್ಕೆ ಕೂರಿಸಿದ್ದೀರಿ. ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗತಕ್ಕಂಥಾ ಒಂದು ಭಾರವನ್ನು ನನಗೆ ವಹಿಸಿಕೊಟ್ಟಿದ್ದೀರಿ. ಈ ಸದನದ ಕಾರ್ಯಕಲಾಪಗಳು ಸರ್ವೋಚ್ಚ, ಸಾರ್ವಭೌಮ ಇದ್ದ ಹಾಗೆ. ರಾಜ್ಯದ ಆಡಳಿತವನ್ನು ನಡೆಸತಕ್ಕಂಥಾ ಈ ಸದನ ಬಹಳ ಜವಾಬ್ದಾರಿಯುತವಾದುದಾಗಿದೆ. ಇದರ ಒಂದು ಅರಿವು ನನಗೆ ಸದಾ ಇದೆ. ನಾನು ಈ ಸದನಕ್ಕೆ ಸದಸ್ಯನಾಗಿ ಬಹುಕಾಲದಿಂದ ಇದ್ದೆ ಹಾಗೂ ವಿರೋಧ ಪಕ್ಷದ ಸದಸ್ಯನಾಗಿಯೂ ಬಹುಕಾಲ ಇದ್ದೆ. ಸುಮಾರು ೧೦ ವರ್ಷಗಳ ಕಾಲ ಕೆಲಸ ಮಾಡತಕ್ಕಂಥಾ ಅವಕಾಶ ನನಗೆ ದೊರಕಿತ್ತು. ನನ್ನ ಜೊತೆ ಯಲ್ಲಿದ್ದಂಥಾ ಮಿತ್ರರೂ ಕೂಡ ಈಗ ಇದ್ದಾರೆ. ಈವೊತ್ತು ಅವರ ಒಂದು ಅನುಭವ ಮತ್ತು ಈ ಹಿಂದೆ ನಮಗೆ ಮಾರ್ಗದರ್ಶನ ಮಾಡಿರತಕ್ಕಂಥಾ ಹಿರಿಯ ಸಭಾಧ್ಯಕ್ಷರ ಅನುಭವ ಈ ಎಲ್ಲಾ ಅರಿವೂ ನನಗೆ ಇದೆ ಎನ್ನುವುದನ್ನು ಜ್ಞಾಪಿಸಿಕೊಂಡು ಈ ಸ್ಥಾನ ಎಷ್ಟು ಹೊಣೆಗಾರಿಕೆಯುಳ್ಳಂಥಾ ಸ್ಥಾನ, ಈ ಸ್ಥಾನದಲ್ಲಿ ಕೊಟ್ಟಂಥಾ ತೀರ್ಪು ಎಷ್ಟರಮಟ್ಟಿಗೆ ಪಕ್ಷಾತೀತವಾದುದು ಎನ್ನುವ ಅರಿವೂ ಕೂಡ ನನಗೆ ಇದೆ. ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ಮತ್ತು ಶ್ರೀಮಾನ್ ಗಂಗಾಧರ್‌ರವರು ಬಹಳ ಪ್ರಾಮುಖ್ಯವಾದ ವಿಚಾರಗಳನ್ನು ಹೇಳಿದ್ದಾರೆ ಹಾಗೆಯೇ ಶ್ರೀಮಾನ್ ಅಜೀಜ ಸೇಟ್‌ರವರೂ ಸಹ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನನಗೆ ಸಂತೋಷವಾಗಿದೆ. ಒಂದು ವಿಚಾರ ಏನೆಂದರೆ ವಿರೋಧ ಪಕ್ಷದ ವತಿಯಿಂದ ಪ್ರಸ್ತಾಪ ಮಾಡತಕ್ಕಂಥಾ ವಿಚಾರ ಏನು ಇದೆ ಅದು ಕೆಲವು ಸಮಯದಲ್ಲಿ ಅದು ಸದ್ವಿನಿಯೋಗವಾಗಬೇಕು ಎನ್ನುವ ವಿಚಾರ ಏನು ಹೇಳಿದ್ದಾರೆ ಅದು ಬಹಳ ಮಹತ್ವ ಪೂರ್ಣ ವಾದುದು ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಈ ಸಭೆಯ ಪ್ರತಿಯೊಂದು ನಿಮಿಷವೂ ಕೂಡ ರಾಜ್ಯಕ್ಕೆ ಒಂದು ದಿಕ್ಕು ತೋರಿಸುವಂಥಾ ದಾರಿಯಲ್ಲಿ ಹೋಗಬೇಕಾಗಿದೆ. ಅದು ಅನ್ಯಥಾ ಬೇರೆ ಮಾರ್ಗದಲ್ಲಿ ಅಪವ್ಯಯವಾಗಿ ಹೋಗಬಾರದು ಅನ್ನುವ ಅರಿವು ಸದಸ್ಯರಿಗೆ ಅದರಲ್ಲೂ ವಿರೋಧ ಪಕ್ಷದ ಸದಸ್ಯರಾಗಿ ಬಂದಿರತಕ್ಕಂಥಾವರಿಗೆ ಬಂದಿರತಕ್ಕಂಥಾ ಅರಿವು ಬಹಳ ಸ್ವಾಗತಾರ್ಹವಾದುದು. ಅದನ್ನು ನಾವು ಮಾನ್ಯ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ನಾವು ಕಾರ್ಯಕಲಾಪಗಳನ್ನು ಮಾಡುವುದಕ್ಕೆ ಹಾಗೂ ಈ ಸಭೆಯ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕೆ ನಾನು ಸರ್ವ ಪ್ರಯತ್ನ ಮಾಡುತ್ತೇನೆ, ಅದಕ್ಕಾಗಿ ನನಗೆ ಈ ಒಂದು ಸದವಕಾಶ ದೊರಕಿದೆ ಎಂದು ಭಾವಿಸುತ್ತೇನೆ. ನನಗೆ ಈ ಅವಕಾಶ ಬರುತ್ತದೆ ಎಂದು ತಿಳಿದುಕೊಂಡಿರಲಿಲ್ಲ. ರಾಜ್ಯದ ಮುಖ್ಯ ಮಂತ್ರಿಗಳು ನಿನ್ನೆ ನನ್ನನ್ನು ಕರೆದು ಹೇಳಿದಾಗ, ಪಕ್ಷದ ತೀರ್ಮಾನ ಈ ರೀತಿ ತೆಗೆದುಕೊಂಡಿದೆ ಎಂದು ಹೇಳಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಈ ಒಂದು ಹೊಣೆಗಾರಿಕೆಯನ್ನು ಹೊರುವುದಕ್ಕೆ ನಾನು ಆ ಸಂದರ್ಭದಲ್ಲಿ ಹಿಂದೂ ಮುಂದೂ ನೋಡಲಿಲ್ಲಾ ಕಾರಣ ಇಷ್ಟೆ. ತಾವೂ ಕೂಡ ಪ್ರಸ್ತಾಪ ಮಾಡಿದ್ದೀರಿ. ಈವೊತ್ತು ಈ ಸದನದ ಎಲ್ಲಾ ಸದಸ್ಯರ ಭಾಷಣದಲ್ಲಿ ಅವರ ಕಳಕಳಿ ಏನು ಇದೆ ಎಂದು ನಾನು ಗಮನಿಸಿದೆ. ಅವರ ಕಳಕಳಿ ಏನು ಇದೆ ಎಂದರೆ ರಾಜ್ಯದ ಬಗ್ಗೆ ಕಳಕಳಿ, ರಾಷ್ಟ್ರದ ಬಗ್ಗೆ ಕಳಕಳಿ, ನಮ್ಮ ಪ್ರಜಾಪ್ರಭುತ್ವ ಈ ಒಂದು ದಿಶೆಯಲ್ಲಿ ಹೋಗಬೇಕು ಅದು ಯಾವ ರೀತಿಯಲ್ಲಿ ಹೋಗಬೇಕು ಅನ್ನುವ ಬಗ್ಗೆ ಕಳಕಳಿ ವ್ಯಕ್ತ ಮಾಡಿದ್ದಾರೆ. ಹಾಗೂ ಈ ಸ್ಥಾನದಲ್ಲಿ ಕುಳಿತಿರತಕ್ಕಂಥಾ ವ್ಯಕ್ತಿ ಅಂದರೆ ಅಧ್ಯಕ್ಷರು ಯಾವ ಒಂದು ರಾಜಕೀಯ ಪಕ್ಷಕ್ಕೆ ಸೇರಿದ್ದರು ಕೂಡ ಅವರು ಯಾವ ರೀತಿಯಾಗಿ ಪಕ್ಷಾತೀತವಾಗಿ ನಡೆದುಕೊಂಡು ಹೋಗಬೇಕು ಹೇಗೆ ಇರಬೇಕು ಎಲ್ಲಾ ವಿಚಾರಗಳನ್ನೂ ಪ್ರಸ್ತಾಪ ಮಾಡಿದ್ದೀರಿ. ಆರೀತಿ ಇರಲೇಬೇಕು

ಈ ಒಂದು ಅಭಿಪ್ರಾಯವನ್ನು ತಾವೇನು ಸೂಚಿಸಿದ್ದೀರಿ ಇದು ಬಹಳ ಪ್ರಾಮುಖ್ಯವಾದಂಥಾ ವಿಚಾರ. ಅದನ್ನು ಕಾರ್ಯಗತ ಮಾಡುವುದರಲ್ಲಿ ನಾನು ಪ್ರಯತ್ನ ಮಾಡುತ್ತೇನೆ ಎಂದು ತಮಗೆ ಭರವಸೆ ಕೊಡುತ್ತೇನೆ. ಇದಕ್ಕೆ ಸಹಾಯ ಮಾಡಿಕೊಟ್ಟಿರತಕ್ಕಂಥಾ ಪಕ್ಷದ ನಾಯಕರು ಹಾಗೂ ರಾಜ್ಯದ ಮುಖ್ಯಮಂತ್ರಿಗಳಿಗೂ ಮತ್ತು ಪಕ್ಷದ ಸದಸ್ಯರಿಗೂ ನನ್ನ ವಂದನೆಗಳನ್ನು ಸಲ್ಲಿಸಿದರೆ ತಪ್ಪಾಗಲಾರದು ಎಂದು ನಾನು ಭಾವಿಸುತ್ತೇನೆ. ಮತ್ತು ಇದೇ ಸಮಯದಲ್ಲಿ ಈ ಸದನದ ಎಲ್ಲಾ ಸದಸ್ಯರಿಗೂ ಕೂಡ ತಾವು ನನ್ನನು ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿಯೂ ಮತ್ತು ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದಕ್ಕಾಗಿಯೂ ಮತ್ತು ಈ ಬಗ್ಗೆ ತಾವುಗಳು ಅಭಿಮಾನಪೂರ್ವಕವಾಗಿ ಬಹಳ ಪ್ರೀತಿಯಿಂದ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿಯೂ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಅದರಲ್ಲೂ ಶ್ರೀಮಾನ್ ಗಂಗಾಧರ್‌ರವರು ಒಂದು ಹೆಜ್ಜೆ ಮುಂದಿಟ್ಟು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಈ ಸದನದಲ್ಲಿ ಗ್ರಂಥಾಲಯ ಹೇಗೆ ಇರಬೇಕು ಅದನ್ನು ಯಾವ ರೀತಿ ವಿನಿಯೋಗ ಮಾಡಿಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಈ ಸಮಯದಲ್ಲಿ ನನಗೂ ಕೂಡ ಜ್ಞಾಪಕ ಬರುತ್ತದೆ. ಹಿಂದೆ ಅಧ್ಯಕ್ಷರಾಗಿದ್ದಂಥಾ ದಿವಂಗತ ಬಾಳಿಗಾರವರು ಈ ಬಗ್ಗೆ ಬಹಳ ಉಪಯೋಗ ಮಾಡಿಕೊಂಡು ಬಹಳ ಚೆನ್ನಾಗಿ ವ್ಯವಸ್ಥೆ ಮಾಡಿದ್ದರು. ಅಷ್ಟೇ ಅಲ್ಲ ಈ ಸಭೆಯ ಕಾರ್ಯಕಲಾಪಗಳು ನಡೆಯುವಾಗ ಅದರಲ್ಲೂ ಬಡ್ಜೆಟ್ ಸಮಯದಲ್ಲಿ ಯಾವ ಯಾವ ಡಿಮ್ಯಾಂಡ್‌ಗಳು ಬರುತ್ತದೋ ಅಂಥಾ ಸಮಯದಲ್ಲಿ ಅದಕ್ಕೆ ಸಂಬಂಧಪಟ್ಟಂಥಾ ಪುಸ್ತಕಗಳನ್ನು ರೆಫರೆನ್ಸ್ ಬುಕ್ಸ್‌ಗಳನ್ನು ನಮ್ಮ ಲಾಂಜ್ ಪಕ್ಕದಲ್ಲಿ ಓದುವುದಕ್ಕೆ ಒಂದು ವ್ಯವಸ್ಥೆ ಮಾಡಿಕೊಟ್ಟಿದ್ದರು. ಸಂಬಂಧಪಟ್ಟ ಪುಸ್ತಕಗಳನ್ನು ಇಲ್ಲೇ ಒದಗಿಸಿ ಕೊಡುವ ವ್ಯವಸ್ಥೆ ಮಾಡಿದ್ದರು. ನಾನೂ ನೋಡಿದ್ದೇನೆ, ನಾನೂ ಕೂಡ ಅದರ ಸಹಾಯವನ್ನು ಪಡೆದುಕೊಂಡಿದ್ದೇನೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ತಾವುಗಳು ಕೊಟ್ಟಿರತಕ್ಕಂಥಾ ಸಲಹೆಗಳು ಬಹಳ ಸ್ವಾಗತಾರ್ಹವಾದುದು ಎಂದು ಹೇಳುತ್ತಾ ಇನ್ನೊಂದು ಅಭಿಪ್ರಾಯವನ್ನೂ ಸಹ ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ಸದನದಲ್ಲಿ ಅಧ್ಯಕ್ಷರ ಹೆಚ್ಚು ಗಮನವನ್ನು ಸೆಳೆಯುವುದಕ್ಕೆ ವಿರೋಧಪಕ್ಷ ಪ್ರಯತ್ನ ಪಡತಕ್ಕಂಥಾದ್ದು ನ್ಯಾಯವಾದುದೇ. ಈವೊತ್ತಿನ ದಿವಸ ಪ್ರಜಾಪ್ರಭುತ್ವ ಸದೃಢವಾಗಿ ಬೇರೂರಬೇಕಾದರೆ ವ್ಯವಸ್ಥಿತವಾದಂಥಾ ವಿರೋಧ ಬೇಕಾಗುತ್ತದೆ. ಇದು ಕಠಿಣವಾದ ವಿಚಾರವೇನೂ ಅಲ್ಲ. ವಿರೋಧ ಪಕ್ಷದವರು ಗಂಭೀರವಾಗಿ ಒಳ್ಳೊಳ್ಳೆಯ ಸಲಹೆಗಳನ್ನು ಕೊಟ್ಟರೆ ಸರ್ಕಾರ ಅದನ್ನು ಸ್ವೀಕಾರ ಮಾಡತಕ್ಕ ವಿಚಾರವಾಗುತ್ತದೆ ಅಷ್ಟೇ ಅಲ್ಲದೆ ಅದನ್ನು ಜಾರಿಗೆ ತಂದರೆ ಒಳ್ಳೆಯ ಸತ್‌ಸಂಪ್ರದಾಯವೂ ಆಗುತ್ತದೆ ಎನ್ನುವ ವಿಚಾರವನ್ನು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಇದೇ ಸಮಯದಲ್ಲಿ ಇನ್ನೊಂದು ಮಾತನ್ನು ಮಾನ್ಯ ಶ್ರೀ ಪಟೇಲ್‌ರವರು ಹೇಳಿದರು. ಅದೇನೆಂದರೆ, ಆಡಳಿತ ಪಕ್ಷ ಒಂದು ತೃಣ ತಪ್ಪು ಮಾಡಿದರೂ ಸಹ ಅದರಿಂದ ಬಹಳ ಅನಾಹುತವಾಗುತ್ತದೆ ಎಂದು. ಆದರೆ ಅದನ್ನು ಈ ಸಂದರ್ಭದಲ್ಲಿ ಉಲ್ಲೇಖ ಮಾಡುವುದಕ್ಕೆ ಬರುವುದಿಲ್ಲ. ಅವರು ಬ್ರಿಟಿಷ್‌ರ ಹೌಸ್ ಆಫ್ ಕಾಮನ್ಸ್‌ನ ಒಂದು ಉಲ್ಲೇಖ ಮಾಡಿದ್ದಾರೆ. ಅದು ಈ ಪ್ರಚಲಿತ ವರ್ಷದಲ್ಲಿ ಮಾಡಲಿಕ್ಕೆ ಬರುವುದಿಲ್ಲ. ಏತಕ್ಕೆಂದರೆ ಇಲ್ಲಿ ವಿರೋಧ ಪಕ್ಷವೂ ಅದೇ ಪ್ರಮಾಣದಲ್ಲಿ ಇದೆ. ನಾನು ಈ ಮಾತನ್ನು ಹೇಳಿದರೆ ತಾವು ಅನ್ಯಥಾ ಭಾವಿಸುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಅದೇನೆಂದರೆ ಈ ಸದನದ ಸಮಯವನ್ನು ನಾವು ದುರುಪಯೋಗ ಮಾಡಬಾರದು ಹಾಗೂ ಈ ಸದನದ ಪ್ರತಿಬಿಂಬವೂ ಹಾಗೆಯೇ ಇರುತ್ತದೆ ಎಂದು ಹೇಳುತ್ತೇನೆ. ಸಮಾಜದ ಚಾಲನೆಯಾಗಿರತಕ್ಕಂಥಾ ಈ ಸಮಾಜದಲ್ಲಿ ಮತ್ತು ಈ ಚಾಲನೆಯಲ್ಲಿ ಸೇರಿದಂಥಾ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರತಕ್ಕಂಥಾವರ ಬಗ್ಗೆ ಇಲ್ಲಿ ಚರ್ಚೆಗೆ ಬಂದಾಗ ಅದನ್ನು ಹೊರಗಡೆ ದೃಷ್ಟಿಯಿಂದ ನೋಡದೆ ಅವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡತಕ್ಕಂಥಾ ದೃಷ್ಟಿಯಿಂದ ವಿಚಾರ ಮಾಡಬೇಕಾಗುತ್ತದೆ. ಆ ವಿಚಾರದಲ್ಲಿ ಕೆಲವು ಸಂದರ್ಭಗಳಲ್ಲಿ ಘರ್ಷಣೆಗಳು ಬರುವುದು ಅನಿವಾರ್ಯ. ಆದರೆ ಅಂತಹ ಘರ್ಷಣೆಗಳು ಬಂದಾಗ ಅದರ ಬಗ್ಗೆ ಪ್ರಗತಿದಾಯಕವಾದ ವಿಚಾರಗಳನ್ನು ಮಂಡಿಸುವಾಗ ಈ ಸಮಾಜದಲ್ಲಿ ದೋಷಪೂರಿತವಾದ ವಿಚಾರ ಏನು ಇದೆ ಅದನ್ನು ನಾವು ಗಮನಿಸಬೇಕಾಗುತ್ತದೆ. ಈ ಸಮಯದಲ್ಲಿ ನಾನು ಈ ಮಾತನ್ನು ಹೇಳಿದರೆ ತಾವು ಅನ್ಯಥಾ ಭಾವಿಸುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಈವೊತ್ತು ಇದು ಇನ್ನೂ ಹೆಚ್ಚಿನ ವೇಗದಲ್ಲಿ ಮುಂದೆ ಹೋಗಿ ಮುಂದುವರೆಯಬೇಕು. ನಾನು ಈ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಸಮಾಜದ ಹಿತರಕ್ಷಣೆ ಮಾಡುವಾಗ ಎಲ್ಲರೂ ಕೂಡ ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ಪ್ರತಿಯೊಬ್ಬರೂ ಸಹ ಸಹಾಯಕವಾಗಿ ಕೆಲಸ ಮಾಡಬೇಕಾಗುತ್ತದೆ. ನಾನು ಮತ್ತೊಮ್ಮೆ ಹೇಳುತ್ತೇನೆ ನಾನು ಇಲ್ಲಿ ಕೆಲಸ ಮಾಡಬೇಕಾದರೆ ಈ ಸದನದ ಎಲ್ಲಾ ಸದಸ್ಯರ ಸಹಾಯ ಸಹಕಾರ ಬೇಕಾಗುತ್ತದೆ.

ಆದರಲ್ಲೂ ಕೂಡ ಪ್ರಮುಖವಾಗಿರತಕ್ಕಂಥಾ ವಿರೋಧಪಕ್ಷದವರ ಸಹಾಯ ಸಹಕಾರವೂ ಬೇಕಾಗುತ್ತದೆ. ಆಡಳಿತ ಪಕ್ಷವೂ ಸಹ ಚೆನ್ನಾಗಿ ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿ ಆಡಳಿತ ಪಕ್ಷ ಚೆನ್ನಾಗಿ ಕೆಲಸ ಮಾಡಬೇಕಾದರೆ ರಾಜ್ಯಕ್ಕೆ ಬೇಕಾದಂಥಾ ಕೆಲಸ ಮಾಡಬೇಕಾದರೆ ವಿರೋಧ ಪಕ್ಷದವರ ಪ್ರಾಮುಖ್ಯತೆಯನ್ನೂ ಗಮನಿಸಬೇಕಾಗುತ್ತದೆ. ಅದಕ್ಕೆ ತಮ್ಮ ಸಹಕಾರವನ್ನು ಕೊಡಬೇಕಾಗುತ್ತದೆ. ಇಂತಹ ಒಂದು ಸತ್‌ಸಂಪ್ರದಾಯವನ್ನು ನಮ್ಮ ವಿಧಾನ ಸಭೆಯಲ್ಲಿ ಸಾಕಷ್ಟು ಹಿಂದೆ ತೋರಿಸಿದ್ದಾರೆ. ತಮಗೆ ಹೇಳಬೇಕಾದರೆ ಇಡೀ ರಾಷ್ಟ್ರದಲ್ಲಿ ನಮ್ಮ ಈ ವಿಧಾನ ಸಭೆ ಸೌಜನ್ಯ ಪೂರಿತವಾದ ಸಭೆ ಎಂದು ಅನಿಸಿಕೊಂಡು ಬಂದಿದೆ, ಈ ಬಗ್ಗೆ ಸತ್‌ಸಂಪ್ರದಾಯವನ್ನು ಹಾಕುವದರಲ್ಲಿ ಯಾವತ್ತೂ ಹಿಂದೆ ಬಿದ್ದಿಲ್ಲ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ ಈ ರಾಜ್ಯದ ಹೆಸರನ್ನು ಕರ್ನಾಟಕವೆಂದು ಹೆಸರಿಡುವುದಕ್ಕೆ ಪ್ರಯತ್ನಪಟ್ಟಾಗ ಈ ಸಭೆಯು ಯಾವ ವಿರೋಧವಿಲ್ಲದೆ ಆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಭೂ ಶಾಸನ ಮಾಡುವಾಗ ಯುನಾನಿಮಸ್ ಆಗಿ ತೀರ್ಮಾನ ತೆಗೆದುಕೊಂಡು ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಹೀಗೆ ಅನೇಕ ಕಾನೂನುಗಳನ್ನು ಮಾಡುವಾಗ ಈ ಸಭೆಯು ಆ ಕಾನೂನು ಅವಶ್ಯಕತೆಯನ್ನು ಗಣನೆಗೆ ತೆಗೆದುಕೊಂಡು ಸತ್‌ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ ಈ ದೃಷ್ಟಿಯಲ್ಲಿ ನಮ್ಮ ಸದನ ರಾಷ್ಟ್ರದಲ್ಲೇ ಒಂದು ಮಾದರಿಯಾದಂತಹ ಕೆಲಸ ಮಾಡುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನಪಟ್ಟಿದ್ದಾರೆ ಹಿಂದೆ ಈ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದವರು ಒಂದು ಸತ್‌ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದಾರೆ. ಈ ಸ್ಥಾನವನ್ನು ಅಲಂಕರಿಸುವುದಕ್ಕೆ ದೊಡ್ಡ ವಿದ್ವತ್ತು, ಪಾಂಡಿತ್ಯ ಮತ್ತು ಅನುಭವ ಬೇಕಾಗುತ್ತದೆ. ಕಾನೂನಿನ ಮತ್ತು ವಾಸ್ತವಿಕತೆಯ ಪರಿಚಯ ಇರಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸಹನೆ ತಾಳ್ಮೆ ಮತ್ತು ಅರಿವು ಇರಬೇಕಾಗುತ್ತದೆ. ಇವೆಲ್ಲವುದರ ಅರಿವು ನನಗಿದೆ ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ಮಾಡುತ್ತೇನೆಂದು ತಮಗೆ ಭರವಸೆಯನ್ನು ಕೊಡುತ್ತೇನೆ. ಈ ಮಾತಿನ ಅರ್ಥ ನಾನು ಅಧ್ಯಕ್ಷ ಸ್ಥಾನವನ್ನು ಬಿಟ್ಟು ಹೋದಮೇಲೆ ಗೊತ್ತಾಗುತ್ತದೆ, ಅಲ್ಲಿಯವರೆಗೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಕಾರಣಾಂತರಗಳಿಂದ ನಾನು ಒಂದು ರಾಜಕೀಯ ಪಕ್ಷಕ್ಕೆ ಸೇರಿದ್ದೇನೆ. ಅಧ್ಯಕ್ಷರಾದಮೇಲೆ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡಬೇಕು ಎನ್ನುವ ಪದ್ಧತಿ ಇದೆ. ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡಲಿ ಹಾಗೆಯೇ ಇರಲಿ ಅದಲ್ಲ ಮುಖ್ಯ, ಅಧ್ಯಕ್ಷಸ್ಥಾನದಲ್ಲಿ ಕುಂತಾಗ ಪಕ್ಷಾತೀತವಾಗಿ ತೀರ್ಮಾನವನ್ನು ಕೈಗೊಳ್ಳುವ ಮನೋಭಾವನೆ ಇರುತ್ತದೆಯೋ ? ಇದು ವಾದಗ್ರಸ್ಥವಾದ ವಿಚಾರವಿದೆ. ಇವತ್ತು ನಾನು ಹಾಗೆ ನಡೆದುಕೊಳ್ಳುತ್ತೇನೆ ಎನ್ನುವುದರ ಬಗ್ಗೆ ತಮಗೆ ಆಶ್ವಾಸನೆಯನ್ನು ಕೊಡುವುದಕ್ಕಿಂತ ಆ ರೀತಿ ನಡೆದುಕೊಂಡು ತೋರಿಸಬೇಕು. ಇವತ್ತು ನಾನು ಎಲ್ಲ ಸದಸ್ಯರ ಪರೀಕ್ಷೆಗೆ ಒಳಗಾಗಿದ್ದೇನೆ ಆದರಲ್ಲೂ ವಿರೋಧ ಪಕ್ಷದ ಸದಸ್ಯರ ಪರೀಕ್ಷೆಗೆ ಹೆಚ್ಚಾಗಿ ಒಳಗಾಗಿದ್ದೇನೆ. ಈ ಪರೀಕ್ಷೆಯಲ್ಲಿ ಉತ್ತೀರ್ಣನಾಗುತ್ತೇನೆ ಎನ್ನುವ ನಂಬಿಕೆ ನನಗಿದೆ. ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂರವರು ಮಾತನಾಡುವಾಗ ಅನೇಕ ಮಹನೀಯರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ದಿವಂಗತ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅಂತಹವರ ಮಟ್ಟಕ್ಕೆ ಹೋಲಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಆ ದಿಶೆಯಲ್ಲಿ ನಡೆಯುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಅಭ್ಯಾಸ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ, ಆ ಮಾತನ್ನು ಮರೆಯಬಾರದೆಂದು ನಾನಾದರೂ ಕೂಡ ಭಾವಿಸುತ್ತೇನೆ. ತಾವು ನನ್ನಿಂದ ಏನನ್ನು ನಿರೀಕ್ಷೆ ಮಾಡುತ್ತಿದ್ದೀರೋ ಆ ನಿರೀಕ್ಷೆ ಮಟ್ಟಕ್ಕೆ ಬರುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ಸದನವನ್ನು ಜನ ಸಾಮಾನ್ಯರ ಹಿತವನ್ನು ರಕ್ಷಣೆ ಮಾಡುವುದಕ್ಕೆ ಸಹಾಯವಾಗುವಂತಹ ರೀತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ, ಇದರಲ್ಲಿ ತಮ್ಮ ಸಂಪೂರ್ಣ ಸಹಕಾರ ಬೇಕಾಗುತ್ತದೆ. ತಮ್ಮ ಸಹಕಾರ ಇಲ್ಲದೆ ಹೋದರೆ ನಾವು ಯಾವ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್‌ರವರು ಪ್ರಸ್ತಾಪ ಮಾಡುತ್ತಾ ಹೇಳಿದರು ಈ ಸಭೆಯ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡಬೇಕೆಂದು ಹೇಳಿದರು. ಇವತ್ತು ನನ್ನ ಕಾನೂನು ಅಥವಾ ಹಕ್ಕು ತಮ್ಮ ಕಾನೂನು ಅಥವಾ ಹಕ್ಕು ಈ ಸಭೆಯಿಂದ ಹುಟ್ಟಿವೆ, ಈ ಸಭೆ ಅದನ್ನು ಕೊಟ್ಟಿದೆ. ಈ ಸಭೆಯ ಸದಸ್ಯರ ಹಕ್ಕುಬಾಧ್ಯತೆಗಳ ಬಗ್ಗೆ ಯಾವುದೇ ಚ್ಯುತಿ ಬರತಕ್ಕಂಥ ರೀತಿಯಲ್ಲಿ ನಡೆದುಕೊಳ್ಳದೆ, ಮತ್ತು ಈ ಮನೆಯ ಪ್ರಾಧಾನ್ಯತೆ ಏನು ಇದೆ ಅದನ್ನು ರಕ್ಷಿಸಿಕೊಂಡು ಹೋಗುತ್ತೇನೆಂಬ ಭರವಸೆಯನ್ನು ಕೊಟ್ಟು ತಮ್ಮ ಸಹಕಾರವನ್ನು ಮತ್ತೊಮ್ಮೆ ಕೋರಿ ಈ ಸದನದ ಎಲ್ಲಾ ಸದಸ್ಯರಿಗೂ, ಪಕ್ಷದ ನಾಯಕರು ಹಾಗೂ ಮುಖ್ಯ ಮಂತ್ರಿಗಳಿಗೆ ಮತ್ತೊಮ್ಮೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

ಈಗ ಒಂದು ಸೂಚನೆ ಬಂದಿದೆ ಮಾನ್ಯ ಸದಸ್ಯರಾದ ಪಂಪಾಪತಿಯವರು ಈ ಸಭೆಯ ಕಾರ್ಯಕಲಾಪಗಳನ್ನು ಇನ್ನು ಮೇಲೆ ಕನ್ನಡದಲ್ಲಿಯೇ ಆಗಬೇಕೆಂದು ತಿಳಿಸಿದ್ದಾರೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತೇನೆ. ಅಲ್ಲದೆ (1) ಮಾನ್ಯ ಭಾಸ್ಕರಶೆಟ್ಟಿಯವರನ್ನು ಸರ್ಕಾರಿ ಮುಖ್ಯ ಸಚೇತಕರನ್ನಾಗಿ ಸರ್ಕಾರ ನೇಮಕ ಮಾಡಲಾಗಿದೆ. (2) ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಈ ಸಭೆಯನ್ನು 7ನೇ ತಾರೀಖಿನ ಮೇಲೆ ಮುಂದೂಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ ಅದು ಇಂಗ್ಲೀಷ್ ಭಾಷೆಯಲ್ಲಿದೆ ತಮ್ಮ ಅಪ್ಪಣೆ ಪಡೆದು ಆಂಗ್ಲ ಭಾಷೆಯಲ್ಲಿ ಓದುತ್ತೇನೆ.

ANNOUCEMENT

The Business Advisory Committee which met Yesterday have recommended that the House may take up discussion on the Motion of Thanks to the Governor's Address from Saturday, the 31st January to Friday, the 6th February 1981 including reply by the Government. The Committee have also recommended that the House may take up certain urgent bills on Saturday, the 7th February 1981 and adjourn on 7th to meet in the first week of March. ಇಷ್ಟು ಹೇಳುತ್ತಾ ಬಿಸಿನೆಸ್ ಅಡ್ವೈಸರಿ ಕಮಿಟಿಯವರ ತೀರ್ಮಾನಕ್ಕೆ ಬದ್ಧರಾಗಿ ನಡೆಸಿಕೊಂಡು ಹೋಗಲು ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಈಗ ಈ ಸಭೆಯು ಇವತ್ತಿನ ಕಾರ್ಯಕಲಾಪಗಳನ್ನು ಮುಗಿಸಿ ಮೇಲಕ್ಕೆದ್ದು ನಾಳೆ ಪುನಃ ಬೆಳಿಗ್ಗೆ ೯ ಗಂಟೆಗೆ ಸೇರುತ್ತದೆ.

The House adjourned at Sixteen minutes past three of the Clock to meet again at Nine of the Clock on Saturday the 31st January 1981.